Swabhimani Sahakari

Pages - 28, ₹12

Volume -14

Issue - 08

August - 2017

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ




## ಸ್ವಾತಂತ್ರ್ಯ ದಿನಾಚರಣೆ:
## ರಾಜ್ಯದ ಸೌಹಾರ್ದ ಸಹಕಾರಿಗಳಿಗೆಲ್ಲಾ ಶುಭಾಶಯಗಳು.





ಭಾರತದ 14ನೇ ರಾಷ್ಟ್ರಪತಿ ಶ್ರೀ ಕೋವಿಂದರವರಿಗೆ ಹಾಗೂ
13ನೇ ಉಪರಾಷ್ಟ್ರಪತಿ ಶ್ರೀ ವೆಂಕಯ್ಯನಾಯ್ಡು ರವರುಗಳಿಗೆ
ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಶುಭಾಶಯಗಳು.

**ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ನೂತನ ನಿರ್ದೇಶಕರುಗಳ ಆಯ್ಕೆ**

**ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾಗಿ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಜಗದೀಶ ಕವಟಗಿಮಠ ಅವಿರೋಧ ಆಯ್ಕೆ**

▸▸ ಸೌಹಾರ್ದ ಸಹಕಾರಿಗಳ ಸಂಖ್ಯೆ : 4095 ▸▸ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1052

# ಸಂಯುಕ್ತ ಸಹಕಾರಿಯ ಚುನಾವಣೆ : ಸಹಕಾರಿಗಳ ಆಸಕ್ತಿ ಅಭಿನಂದನೀಯ : ಪ್ರಬುದ್ಧತೆಗೆ ನಮಸ್ಕಾರ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಅಭಿನಂದನೆ : ಯಶಸ್ವಿ ಕಾರ್ಯನಿರ್ವಹಣೆಗೆ ಸೌಹಾರ್ದ ಸಹಕಾರಿಗಳ ಸಹಕಾರ



**ಆತ್ಮೀಯ ಸಹಕಾರಿ ಬಂಧುಗಳೇ,**

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ 71ನೇ ಸ್ವಾತಂತ್ರ್ಯ ದಿನಾಚರಣೆಯ, ವರಮಹಾಲಕ್ಷ್ಮೀ, ರಕ್ಷಾಬಂಧನ, ಕೃಷ್ಣ ಜನ್ಮಾಷ್ಟಮಿ, ಗೌರಿ ಗಣೇಶ ಹಬ್ಬಗಳ ಶುಭಾಷಯಗಳು.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆಗಾಗಿ ನಡೆದ ಸ್ಪರ್ಧೆಗಾಗಿ ಬೆಂಗಳೂರು ವಿಭಾಗದಿಂದ 32, ಮೈಸೂರು ವಿಭಾಗದಿಂದ 11, ಬೆಳಗಾವಿ ವಿಭಾಗದಿಂದ 28 ಮತ್ತು ಕಲಬುರಗಿ ವಿಭಾಗದಿಂದ 26 ಸೇರಿದಂತೆ ಒಟ್ಟಾರೆ 97 ನಾಮಪತ್ರಗಳು ದಾಖಲಾಗಿರುವುದು ಸೌಹಾರ್ದ ಸಹಕಾರಿಗಳ ಕ್ರಿಯಾಶೀಲತೆಗೆ ಸಾಕ್ಷಿ. ಮಾನ್ಯ ಪ್ರಾದೇಶಿಕ ಆಯುಕ್ತರು ಹಾಗೂ ಅಪೆಕ್ಸ್ ಸಹಕಾರಿ ಸಂಸ್ಥೆಗಳ ಚುನಾವಣಾಧಿಕಾರಿಗಳು ಪ್ರಕಟಿಸಿದ ಒಟ್ಟು 1565 ಅರ್ಹ ಮತದಾರರಲ್ಲಿ 1439 ಪ್ರತಿನಿಧಿಗಳು ಮತಚಲಾಯಿಸಿರುವುದು, ಶೇ.92ರಷ್ಟು ಮತದಾನ ಸಂಯುಕ್ತ ಸಹಕಾರಿಯಲ್ಲಿ ಸರ್ವಕಾಲಿಕ ಹಾಗೂ ಒಂದು ಐತಿಹಾಸಿಕ ದಾಖಲೆ ಎನಿಸಿದೆ. ಇವುಗಳಲ್ಲಿ 48 ಅಭ್ಯರ್ಥಿಗಳು ಕಣದಲ್ಲಿ ಉಳಿದು ಅಂತಿಮವಾಗಿ 21 ಅಭ್ಯರ್ಥಿಗಳು ನಿರ್ದೇಶಕರಾಗಿ ಆಯ್ಕೆಯಾಗಿರುವುದು, ಶಾಂತಿಯುತ ಮತದಾನ ನಡೆದಿರುವುದು ಹಾಗೂ ಮತ ಎಣಿಕೆಗಳ ಸಮಯದಲ್ಲಿ ಶಾಂತಿ, ಶಿಸ್ತು, ಸಹಕಾರ ಹಾಗೂ ತಾಳ್ಮೆ ಪ್ರಶಂಸನೀಯ ಮತ್ತು ಪ್ರಜಾಪ್ರಭುತ್ವದ ಜ್ವಲಂತ ಉದಾಹರಣೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿ ನಾಮಪತ್ರ ಸಲ್ಲಿಸಿದ್ದ ಎಲ್ಲಾ ಸಹಕಾರಿಗಳು ಅಭಿನಂದನೀಯರು. ಚುನಾವಣೆ ನಡೆದು ನೂತನ ಆಡಳಿತ ಮಂಡಲಿ ಅಧಿಕಾರಕ್ಕೆ ಬಂದಿದೆ. ಚುನಾವಣೆ ಶಾಂತಿಯುತವಾಗಿ ನಡೆಯಲು ಸಹಕರಿಸಿದ ಎಲ್ಲಾ ಸಹಕಾರಿಗಳಿಗೆ, ಚುನಾವಣೆಯನ್ನು ಶಾಂತಿಯುತವಾಗಿ ನಡೆಸಿಕೊಟ್ಟ ರಿಟರ್ನಿಂಗ್ ಅಧಿಕಾರಿಗಳಿಗೆ ಹಾಗೂ ಸಹಾಯಕ ಅಧಿಕಾರಿಗಳಿಗೆ, ಸಿಬ್ಬಂದಿಯವರಿಗೆ, ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ಹಾಗೂ ಎಲ್ಲಾ ಸಿಬ್ಬಂದಿಯವರಿಗೆ ಅಭಿನಂದನೆಗಳು.

ನೂತನವಾಗಿ ಆಯ್ಕೆಯಾಗಿರುವ ಆಡಳಿತ ಮಂಡಲಿ ಸದಸ್ಯರಿಗೆ ನನ್ನ ವೈಯಕ್ತಿಕ ಅಭಿನಂದನೆಗಳು. ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಯಶಸ್ವಿಯಾಗಿ ಹಾಗೂ ಇನ್ನಷ್ಟು ಪರಿಣಾಮಕಾರಿಯಾಗಿ ಮುನ್ನಡೆಸುವ ಜವಾಬ್ಧಾರಿ ನಮ್ಮೆಲ್ಲರ ಮೇಲೆ ಇದೆ. ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಂಪೂರ್ಣ ಬೆಂಬಲ ಹಾಗೂ ಪ್ರೋತ್ಸಾಹ ಅಗತ್ಯ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಸಮಾಧಾನಕರವಾಗಿದೆಯಾದರೂ ಈ ಕ್ಷೇತ್ರದ ಅಭಿವೃದ್ಧಿಗೆ ಆಗಬೇಕಾಗಿರುವ ಅನೇಕ ಕೆಲಸಗಳು ಬಾಕಿ ಇವೆ. ಅನೇಕ ಸವಾಲುಗಳಿವೆ. ನೂತನ ಆಡಳಿತ ಮಂಡಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಹಕಾರದಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿ ಕಾರ್ಯನಿರ್ವಹಿಸುವುದು ಇಂದಿನ ಅವಶ್ಯಕತೆ ಎಂದು ಭಾವಿಸುತ್ತೇನೆ. ನಿಮ್ಮ ಸಲಹೆ, ಸಹಕಾರ ಹಾಗೂ ಮಾರ್ಗದರ್ಶನಗಳನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ.

▸▸ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು

"ನೂತನವಾಗಿ ಆಯ್ಕೆಯಾಗಿರುವ ಆಡಳಿತ ಮಂಡಲಿ ಸದಸ್ಯರಿಗೆ ನನ್ನ ವೈಯಕ್ತಿಕ ಅಭಿನಂದನೆಗಳು. ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಯಶಸ್ವಿಯಾಗಿ ಹಾಗೂ ಇನ್ನಷ್ಟು ಪರಿಣಾಮಕಾರಿಯಾಗಿ ಮುನ್ನಡೆಸುವ ಜವಾಬ್ಧಾರಿ ನಮ್ಮೆಲ್ಲರ ಮೇಲೆ ಇದೆ. ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಂಪೂರ್ಣ ಬೆಂಬಲ ಹಾಗೂ ಪ್ರೋತ್ಸಾಹ ಅಗತ್ಯ."

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಎಸ್.ಆರ್. ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
“ನಿರ್ಮಾಣ ಭವನ”, ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ : 080–23378375–80, 23474408, 23573291
ಇ–ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒ ಳ ಪು ಟ ಗ ಳ ಲ್ಲಿ . . .

ಜ್ಞಾನ ಜ್ಯೋತಿ ........ 4
ನೂತನ 14ನೇ ರಾಷ್ಟ್ರಪತಿಯಾಗಿ ಶ್ರೀ ರಾಮನಾಥ್ ಕೋವಿಂದ್ ........ 5
7 ದಿನಗಳ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ ಮುಕ್ತಾಯ ........ 7
ಶಿಬಿರಾರ್ಥಿಗಳ ಆಯ್ದ ಅನಿಸಿಕೆಗಳು ........ 8
ನೂತನ ನಿರ್ದೇಶಕರುಗಳ ಆಯ್ಕೆ ........ 12
ಸೌಹಾರ್ದ ಸಹಕಾರಿ ಸಮಾಚಾರಗಳು ........ 15–16
ಸಹಕಾರಿ ಬ್ಯಾಂಕರನ ಮಹತ್ವದ ಪಾತ್ರ ........ 21
'ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ'ಯ ಪರಿಚಯ ಹಾಗೂ ಅನುಷ್ಠಾನದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ..... 23
ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಗ್ರಾಹಕರು/ ಸದಸ್ಯರು, ಸಿಬ್ಬಂದಿಗಳು ಹಾಗೂ ಆಡಳಿತ ಮಂಡಳಿಯ ಪಾತ್ರ ...... 25
ಆರ್.ಬಿ.ಐ. ನ್ಯೂಸ್ ........ 27

# ಸಂಪಾದಕೀಯ

## ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯನಿರ್ವಹಣೆ : ರಿಸರ್ವ್ ಬ್ಯಾಂಕ್ ಮೆಚ್ಚುಗೆ

ದಿನಾಂಕ : 01–07–2017 ರಿಂದ 07–07–2017ರವರೆಗೆ ಬೆಂಗಳೂರಿನ ಆರ್‌ಐಸಿಎಂನಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಆಯೋಜಿಸಿದ್ದ 'ಬ್ಯಾಂಕಿಂಗ್ ಮೂಲ ಮಾಹಿತಿ' ತರಬೇತಿ ಕಾರ್ಯಕ್ರಮದ ಉದ್ಘಾಟನೆಗಾಗಿ ಆಗಮಿಸಿದ್ದ ರಿಸರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜನರಲ್ ಮ್ಯಾನೇಜರ್ ಆದ ಶ್ರೀಮತಿ ಕಲ್ಪನಾ ಮೋರೆಯವರು ಹಾಗೂ ಸಮಾರೋಪ ಭಾಷಣ ಮಾಡಿ, ಪ್ರಶಸ್ತಿ ಪತ್ರ ವಿತರಣೆ ಮಾಡಲು ಆಗಮಿಸಿದ್ದ ರಿಸರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜನರಲ್ ಮ್ಯಾನೇಜರ್ ಆದ ಶ್ರೀ ತೊಟಗ್ನಮ್ ಜಮಾಂಗ್‌ರವರು ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣರವರು ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯನಿರ್ವಹಣೆ ಉತ್ತಮವಾಗಿದೆ ಎಂದು ತಿಳಿಸಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಹೆಮ್ಮೆಯ ವಿಷಯ.

ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ನಿತ್ಯ ಹೊಸತನ, ಆಡಳಿತದಲ್ಲಿ ಪಾರದರ್ಶಕತೆ, ವೃತ್ತಿಪರತೆಯ ಕಾರ್ಯನಿರ್ವಹಣೆ ಹಾಗೂ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಮೇಲಾಗಿ ರಿಸರ್ವ್ ಬ್ಯಾಂಕಿನ ಸುತ್ತೋಲೆ, ಮಾರ್ಗದರ್ಶಿಗಳ ಕಟ್ಟುನಿಟ್ಟಿನ ಪಾಲನೆ ಇವೆಲ್ಲವುಗಳಿಂದಾಗಿ ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮ ಕಾರ್ಯನಿರ್ವಹಣೆ ಮಾಡುತ್ತಿವೆ ಎಂದು ರಿಸರ್ವ್ ಬ್ಯಾಂಕಿನವರು ಅಭಿಪ್ರಾಯ ಹೊಂದಲು ಸಾಧ್ಯವಾಗಿದೆ.

ಸೌಹಾರ್ದ ಸಹಕಾರಿ ವ್ಯಾಪ್ತಿಯ ಒಟ್ಟು 18 ಬ್ಯಾಂಕುಗಳಲ್ಲಿ ಹೆಚ್ಚಿನವು ಪ್ರತಿವರ್ಷ ಹೆಚ್ಚಿನ ಪ್ರಗತಿಯತ್ತ ಸಾಗಿವೆ. ಕೆಲವು ಮಾತ್ರ ಸಾಂಪ್ರದಾಯಿಕ ಬ್ಯಾಂಕಿಂಗ್‌ನಿಂದ ಹೊರಬರಬೇಕಿದೆ. ಅಭಿವೃದ್ಧಿಪರ ಚಿಂತನೆ ಮಾಡಬೇಕಿದೆ. ಆಧುನಿಕತೆಯ ಕಡೆಗೆ ಹೆಜ್ಜೆ ಹಾಕಬೇಕಿದೆ. ಬ್ಯಾಂಕಿನ ಚಟುವಟಿಕೆಗಳನ್ನು ತಾಂತ್ರಿಕ ವಿಭಿನ್ನತೆ ಹಾಗೂ ವೈಶಿಷ್ಟ್ಯತೆಗಳ ಕಡೆಗೆ ಕೊಂಡೊಯ್ಯಬೇಕಿದೆ. ಸದರಿ ಬ್ಯಾಂಕುಗಳ ಆಡಳಿತ ಮಂಡಲಿಯವರು ಹಾಗೂ ಅಧಿಕಾರಿ ವರ್ಗದವರು ಈ ನಿಟ್ಟಿನಲ್ಲಿ ಚಿಂತನೆ ಮಾಡಿ ತಮ್ಮ ಬ್ಯಾಂಕುಗಳನ್ನು ಉಳಿದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಾಲಿನಲ್ಲಿ ಪರಿಗಣಿಸಲು ಸಾಧ್ಯವಾಗುವಂತೆ ಪ್ರಯತ್ನಿಸುವಿರಾಗಿ ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ ಹಾಗೂ ಸಂಯುಕ್ತ ಸಹಕಾರಿಯು ತಮ್ಮ ನೆರವಿಗೆ ಸದಾ ಸಿದ್ಧವಿದೆ. ■



## ಜ್ಞಾನ ಜ್ಯೋತಿ

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ
ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ಸತ್ಯ ಸಾರ

ಬದುಕು ನಮಗೆ ಸಂತೋಷವನ್ನು ಕೊಡಬೇಕು ಹಾಗೂ ಅದು ಸ್ವಾತಂತ್ರ್ಯದ ಅನುಭವಕ್ಕೆ ಆಸ್ವದವೀಯಬೇಕು. ಇದು ನಮ್ಮೆಲ್ಲರ ಬಯಕೆ. ಇದಕ್ಕಾಗಿ ಮನುಷ್ಯನಿಗೆ ಬೇಕಾಗಿರುವುದು ಎರಡು ಅಂಶಗಳು. 1) ಪರಮ ಸ್ವಾತಂತ್ರ್ಯ 2) ಪರಮ ಸಂತೋಷ. ಇವೆರಡು ಸಿಗಬೇಕಾದರೆ ನಮ್ಮಲ್ಲಿ "ಸತ್ಯ ದರ್ಶನ"ವಾಗಬೇಕು. ಪರಮ ಸಂತೋಷ ಹಾಗೂ ಪರಮ ಸ್ವಾತಂತ್ರ್ಯವನ್ನು ಹೊರತುಪಡಿಸಿ ಉಳಿದೆಲ್ಲವೂ ಗೌಣ. ಇದನ್ನೇ ಜಗತ್ತಿನ ಎಲ್ಲಾ ಸಂತರು, ಮಹಾತ್ಮರು, ಶರಣರು ಹೇಳಿದ್ದಾರೆ.

ಋಷಿಗಳ ಜೀವನಕ್ಕೆ ಒಂದು ಧ್ಯೇಯ ಇತ್ತು. ಅದು ಸಂತೋಷ, ಸ್ವಾತಂತ್ರ್ಯ. ಅವುಗಳಿಂದ ಅವರು ಉನ್ನತಿ ಸಾಧಿಸಿದರು. ಶಾಂತ ಪರಿಸ್ಥಿತಿಯಲ್ಲಿ ವಿಶ್ವಚಿಂತನೆ ಮಾಡಿದರು. ಬದುಕನ್ನು ಕುರಿತು ಆಳ ಚಿಂತನೆ ಮಾಡಿ ಸಾಧನೆಯ ತುತ್ತ ತುದಿಗೇರಿದರು. ಅರವಿಂದ ಮಹರ್ಷಿ ಹೇಳುವಂತೆ "ಈ ಭೂಮಿಗೆ ನಾವು ಬಂದಿದ್ದು ಏಕೆ? ಎಂಬುದರ ಕುರಿತು ಮೊದಲು ನಿರ್ಧರಿಸಬೇಕು. ನಂತರ ಆ ನಿಟ್ಟಿನಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕು. ಜಗತ್ತನ್ನು ತಿಳಿದುಕೊಳ್ಳಲು ಬಂದಿದ್ದೇವೆ. ಯಾವುದು ಸತ್ಯ? ಕಂಡಿದ್ದು, ನೋಡಿದ್ದು ಸತ್ಯವೇ? ಅಲ್ಲದೇ ಇದರ ಹಿಂದೆಯೂ ಸತ್ಯವೆನ್ನುವುದಿದೆಯೇ? ಹಾಗಾದರೆ ಅದನ್ನು ಅರಿಯಬೇಕು. "ನಾವೇ" ಸತ್ಯದ ಒಂದು ರೂಪ, ಒಂದು ಆಕೃತಿ. ಅದನ್ನು ಮೊದಲು ಅರಿಯಬೇಕು. ಜಗತ್ತೆಲ್ಲ ಸತ್ಯದ ಪ್ರತಿರೂಪವಾದಾಗ ನಾನು ಹೇಗೆ ಸಾಮಾನ್ಯ. ಅದನ್ನು ಅರಿಯುವುದೇ ಸತ್ಯ. ಸತ್ಯ ಅರಿಯುವ ಸಾಮರ್ಥ್ಯವನ್ನು ನಿಸರ್ಗ ನಮಗೆ ಕರುಣಿಸಿದೆ. ಆದ್ದರಿಂದ, ಅದರ ಪರಾಮರ್ಶೆ ಮಾಡುವುದು ಅಗತ್ಯ.

ನಮ್ಮಲ್ಲಿ ಸತ್ಯಕಾಮ, ಉಪಮನ್ಯು, ನಚಿಕೇತ ಇವರೆಲ್ಲ ಸತ್ಯ ಅರಸ ಹೋಗಿ ಅದನ್ನು ಕಂಡುಕೊಂಡವರು. ಉದಾಹರಣೆ "ಹೂವು", ಇದು ಉಳಿಯುವುದೇ, ಇದರಲ್ಲೇನಿದೆ. ಮೇಲಿನ ವಸ್ತು, ಬಣ್ಣ, ಆಕೃತಿ ಮರೆಯಾಗಿ ಇದರಲ್ಲಿ ಉಳಿಯುವುದೇನು? ಎಂಬುದನ್ನು ಗುರುತಿಸುವುದೇ ಸತ್ಯ. ಇದನ್ನು ಬದುಕಿಗೂ ಅನ್ವಯಿಸಿಕೊಂಡು ತಿಳಿಯಬೇಕು. ಜ್ಞಾನವಿಲ್ಲದ ದ್ರವ್ಯ, ಜ್ಞಾನವುಳ್ಳ ಸತ್ಯ ಇವು ಜಗತ್ತಿನಲ್ಲಿರುವ ಎರಡು ವಸ್ತುಗಳು. ಭಾವರಹಿತ ದೀಪ ಉರಿದಂತೆ ನಾನು ಜಗತ್ತನ್ನು ನೋಡಬೇಕು ಎಂಬುದೇ ಋಷಿಗಳ ಭಾವವಾಗಿತ್ತು. ಇದನ್ನು ಪಾಶ್ಚಿಮಾತ್ಯರು ತುಂಬ ಮೆಚ್ಚಿಕೊಂಡರು.

ಈ ಕಾರಣದಿಂದಲೇ ವಿಶ್ವದಲ್ಲಿ ಭಾರತೀಯರು ಶ್ರೇಷ್ಠರೆನಿಸಿಕೊಂಡರು. ಈ ದೇಹ ಬರತದ, ಹೋಗತದ, ಆದರೆ ನಾನು ಬರುವುದಿಲ್ಲ ಅದಕ್ಕೆ ಬಂದ ಸಮಯದಲ್ಲಿ ಸತ್ಯ ಅರಿತುಕೊಳ್ಳುವ ಮಾರ್ಗದಲ್ಲಿ ನಡೆಯಬೇಕು, ಅದಕ್ಕೆ ಸತ್ಸಂಗ ಅವಶ್ಯ. ವಿಶ್ವ ಒಂದು ರೂಪ. ಅದರ ಸಾಕಾರ ರೂಪವೇ ಸೂರ್ಯ (ಬೆಳಕು). ದೇವನೆ ನಾನು ನಿನ್ನನ್ನು ಧ್ಯಾನಿಸುತ್ತೇನೆ. ನೀನು ಅದನ್ನು ತಿಳಿಯುವಲ್ಲಿ ಅನುಗ್ರಹಿಸು. ಜ್ಞಾನದ ಬೆಳಕು ಹಚ್ಚು ಎಂದು ಬೇಡಿಕೊಂಡು ಸತ್ಯ ದರ್ಶನಕ್ಕಾಗಿ ಮನಸ್ಸನ್ನು ಸಿದ್ಧಗೊಳಿಸಬೇಕಿದೆ.

ಪರಮ ಸ್ವಾತಂತ್ರ್ಯ, ಪರಮ ಶಾಂತಿ ಸಿಗಬೇಕಾದರೆ ಎರಡು ಕೆಲಸ ಮಾಡಬೇಕು. ಸತ್ಯ ಅರಿಯುವುದು, ಅದಕ್ಕಾಗಿ ಮನಸ್ಸನ್ನು ಶುದ್ಧಗೊಳಿಸುವುದು, ಆವಾಗ ಮಾತ್ರ ಪರಮ ಸ್ವಾತಂತ್ರ್ಯ, ಪರಮ ಸಂತೋಷ ಸಿಗುವುದು. ಇದನ್ನು ಸಿದ್ಧಿಸಲು "ಮನಸ್ಸು" ಒಂದು ಸಾಧನವಿದ್ದಂತೆ, ಅದನ್ನು ಯೋಗ ಹಾಗೂ ಜ್ಞಾನ ಸಾಧನದಿಂದ ಹದಗೊಳಿಸಿ ಚೆನ್ನಾಗಿ ಬಳಸಬೇಕು. ಇದಕ್ಕಾಗಿ ಸತ್ಸಂಗದಲ್ಲಿರಬೇಕು.

# ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ನೂತನ ನಿರ್ದೇಶಕರುಗಳ ಆಯ್ಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕ ಸ್ಥಾನಕ್ಕೆ ದಿನಾಂಕ 28 ಜುಲೈ 2017ರಂದು ನಡೆದ ಸಾಮಾನ್ಯ ಚುನಾವಣೆಯಲ್ಲಿ ಪ್ರಾಂತವಾರು ಮತದಾನ ಬೆಂಗಳೂರಿನಲ್ಲಿಯೇ ನಡೆದಿರುತ್ತದೆ. ಹಾಗೆಯೇ, ಸದರಿ ದಿನದಂದು ನಡೆದ ಮತ ಎಣಿಕೆಯಂತೆ ಪ್ರಾಂತವಾರು ಅತಿ ಹೆಚ್ಚು ಮತಗಳನ್ನು ಗಳಿಸಿರುವ ಒಂದು ಜಿಲ್ಲೆಗೆ ಒಬ್ಬರಿಗಿಂತ ಹೆಚ್ಚು ನಿರ್ದೇಶಕರು ಆಯ್ಕೆಯಾಗದಂತೆ ಬೆಂಗಳೂರು ಪ್ರಾಂತದಿಂದ 6, ಮೈಸೂರು ಪ್ರಾಂತದಿಂದ 2 ಮತ್ತು ಬೆಳಗಾವಿ ಪ್ರಾಂತದಿಂದ 7 ನಿರ್ದೇಶಕರುಗಳು ಆಯ್ಕೆಯಾಗಿರುವುದಾಗಿ ಮಾನ್ಯ ರಿಟರ್ನಿಂಗ್ ಅಧಿಕಾರಿಗಳು ಘೋಷಿಸಿದರು.

ಆದರೆ, ರಿಟ್ ಅರ್ಜಿ ಸಂಖ್ಯೆ 203475/2017ರ ದಿನಾಂಕ 26 ಜುಲೈ 2017ರ ಮಾನ್ಯ ಉಚ್ಚ ನ್ಯಾಯಾಲಯ (ಕಲಬುರಗಿ ಪೀಠ)ದ ಆದೇಶದಂತೆ ಸದರಿ ದಿನಾಂಕದಂದು ಕಲಬುರಗಿ ಪ್ರಾಂತದ ಫಲಿತಾಂಶವನ್ನು ಘೋಷಿಸಿರುವುದಿಲ್ಲ. ದಿನಾಂಕ : 03 ಆಗಸ್ಟ್ 2017ರಂದು ಸದರಿ ರಿಟ್ ಅರ್ಜಿಯ ವಿಚಾರಣೆ ನಡೆದು, ನ್ಯಾಯಾಲಯದ ಆದೇಶದನ್ವಯ ದಿನಾಂಕ 05 ಆಗಸ್ಟ್ 2017ರಂದು ಕಲಬುರಗಿ ಪ್ರಾಂತದ ಚುನಾವಣಾ ಫಲಿತಾಂಶವನ್ನು ಹಾಜರಿದ್ದ ಅಭ್ಯರ್ಥಿಗಳು ಹಾಗೂ ಅವರುಗಳ ಏಜೆಂಟರುಗಳ ಸಮಕ್ಷಮದಲ್ಲಿ ಮಾನ್ಯ ರಿಟರ್ನಿಂಗ್ ಅಧಿಕಾರಿಗಳು 6 ನಿರ್ದೇಶಕರುಗಳು ಆಯ್ಕೆಯಾಗಿರುವುದನ್ನು ಘೋಷಿಸಿದರು.

ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ಪ್ರಾಂತಗಳಿಂದ ಒಟ್ಟು 21 ನಿರ್ದೇಶಕರುಗಳು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಮುಂದಿನ 5 ವರ್ಷಗಳ ಅವಧಿಗೆ ನಿರ್ದೇಶಕರುಗಳಾಗಿ ಆಯ್ಕೆಯಾಗಿರುತ್ತಾರೆ. (ನಿರ್ದೇಶಕರುಗಳ ವಿವರವನ್ನು ಪುಟ ಸಂಖ್ಯೆ 12 ರಲ್ಲಿ ಪ್ರಕಟಿಸಲಾಗಿದೆ)

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ ಸಂಖ್ಯೆ 6ರನ್ವಯ ದಿನಾಂಕ 14 ಆಗಸ್ಟ್ 2017ರಂದು ಪದಾಧಿಕಾರಿಗಳ ಚುನಾವಣೆ ನಡೆದು, ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಅಧ್ಯಕ್ಷರಾಗಿ ಮತ್ತು ಶ್ರೀ ಜಗದೀಶ ಕವಟಗಿಮಠ ರವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.

ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರುಗಳಿಗೆ ಮತ್ತು ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳಿಗೆ ಸಂಯುಕ್ತ ಸಹಕಾರಿಯ ಪರವಾಗಿ ತುಂಬು ಹೃದಯದ ಅಭಿನಂದನೆಗಳು. ಸಂಯುಕ್ತ ಸಹಕಾರಿಯ ಚುನಾವಣೆಯನ್ನು ಯಶಸ್ವಿಗೊಳಿಸುವಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸಹಕಾರಿಗಳಿಗೂ ಕೃತಜ್ಞತೆಗಳು.

# ನೂತನ 14ನೇ ರಾಷ್ಟ್ರಪತಿಯಾಗಿ ಶ್ರೀ ರಾಮನಾಥ್ ಕೋವಿಂದ್





**ಹೊಸದಿಲ್ಲಿ :** ಶ್ರೀ ರಾಮನಾಥ ಕೋವಿಂದ್ ದೇಶದ 14ನೇ ರಾಷ್ಟ್ರಪತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದು, ಸಂಸತ್ ಭವನದ ಸೆಂಟ್ರಲ್ ಹಾಲಿನಲ್ಲಿ ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಜೆಎಸ್ ಖೆಹರ್ ಅವರು ಪ್ರತಿಜ್ಞಾ ವಿಧಿ ಬೋಧನೆ ಮಾಡಿದರು. ನಂತರ ದೇಶವನ್ನುದ್ದೇಶಿಸಿ ಭಾಷಣ ಮಾಡಿದ ಶ್ರೀ ರಾಮನಾಥ ಕೋವಿಂದ್ ಅವರು, ರಾಷ್ಟ್ರಪತಿ ಹುದ್ದೆ ನನಗೆ ಸಿಕ್ಕ ಅತೀ ದೊಡ್ಡ ಗೌರವ, 'ರಾಷ್ಟ್ರಪತಿ ಹುದ್ದೆಯ ಘನತೆ ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ತಮ್ಮ ಸಂಪೂರ್ಣ ಸಾಮರ್ಥ್ಯ ಮೀರಿ ಕಾರ್ಯ ನಿರ್ವಹಿಸುವುದಾಗಿ' ಅವರು ನುಡಿದರು. ಮಾಜಿ ರಾಷ್ಟ್ರಪತಿಗಳಾದ ಶ್ರೀ ರಾಜೇಂದ್ರ ಪ್ರಸಾದ್ ಅವರಿಂದ ಶ್ರೀ ಪ್ರಣಬ್ ಮುಖರ್ಜಿ ಅವರ ವರೆಗಿನ ಎಲ್ಲ ರಾಷ್ಟ್ರಪತಿಗಳು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಡೆಯುವುದಾಗಿಯೂ ಹಾಗೂ ಅದೇ ಶ್ರೇಷ್ಠತೆಯನ್ನು ಮುಂದುವರೆಸಿಕೊಂಡು ಹೋಗುವ ವಿಶ್ವಾಸ ತಮಗಿದೆ ಎಂದು ನೂತನ ರಾಷ್ಟ್ರಪತಿಗಳು ನುಡಿದಿದ್ದಾರೆ.

ದೇಶದ ವಿವಿಧತೆಯಲ್ಲಿ ಏಕತೆ ಎಂಬ ವಿಚಾರವೇ ಇಡೀ ವಿಶ್ವದಲ್ಲಿ ಭಾರತ ಗೌರವವನ್ನು ಇಮ್ಮಡಿಗೊಳಿಸಿದೆಯಲ್ಲದೇ, ವಿವಿಧತೆಯಲ್ಲಿ ಏಕತೆ ಭಾರತದ ಅತೀ ದೊಡ್ಡ ಶಕ್ತಿ ಹಾಗೂ ಒಗ್ಗಟ್ಟಿನಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಅವರು ಇದೆ ಸಂದರ್ಭದಲ್ಲಿ ಹೇಳಿದ್ದಾರೆ. 71 ವರ್ಷದ ಶ್ರೀ ರಾಮನಾಥ್ ಅವರು ಉತ್ತರ ಪ್ರದೇಶದ ಕಾನ್ಪುರದ ದೇಹಾತ್‌ನಲ್ಲಿ 1945ರ ಅಕ್ಟೋಬರ್ 1ರಂದು ಜನಿಸಿದರು. ವೃತ್ತಿಯಲ್ಲಿ ವಕೀಲರಾಗಿರುವ ಶ್ರೀ ರಾಮನಾಥ್ ಕೋವಿಂದ್ 1971ರಲ್ಲಿ ದೆಹಲಿ ಬಾರ್ ಕೌನ್ಸಿಲ್ ನೋಂದಣಿಯನ್ನು ಕೋವಿಂದ್ ಪಡೆದಿದ್ದು, 1978ರಲ್ಲಿ ಸುಪ್ರೀಂಕೋರ್ಟ್ ವಕೀಲರಾಗಿ ದುಡಿದಿದ್ದಾರೆ.

ಶ್ರೀ ರಾಮನಾಥ್ ಕೋವಿಂದ್ 1994–2000 ಮತ್ತು 2000– 2006ರ ತನಕ ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿದ್ದು, ನಂತರ ಅವರು 2015ರಲ್ಲಿ ಬಿಹಾರದ ರಾಜ್ಯಪಾಲರಾಗಿ ನೇಮಕಗೊಂಡರು. ಶ್ರೀ ರಾಮನಾಥ್ ಕೋವಿಂದ್ ಅವರು ಒಬ್ಬ ರೈತನ ಮಗನಾಗಿದ್ದು, ಇಂದು ನಮ್ಮ ದೇಶದ ರಾಷ್ಟ್ರಪತಿಗಳಾಗಿ ಅಧಿಕಾರ ಸ್ವೀಕರಿಸಿದ್ದಾರೆ.

# 13ನೇ ಉಪರಾಷ್ಟ್ರಪತಿಯಾಗಿ ಶ್ರೀ ವೆಂಕಯ್ಯ ನಾಯ್ಡು



**ದೆಹಲಿ :** ಬಿಜೆಪಿಯ ಹಿರಿಯ ನಾಯಕ, ಕೇಂದ್ರದ ಮಾಜಿ ಸಚಿವ ವೆಂಕಯ್ಯ ನಾಯ್ಡು ದೇಶದ 13ನೇ ಉಪರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.


ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್, ವೆಂಕಯ್ಯ ನಾಯ್ಡು ಅವರಿಗೆ ಪ್ರತಿಜ್ಞಾ ವಿಧಿ ಬೋಧಿಸಿದ್ದು, ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

1949ರ ಜುಲೈ 1ರಂದು ಆಂಧ್ರ ಪ್ರದೇಶದ ನೆಲ್ಲೂರಿನಲ್ಲಿ ಜನಿಸಿದ ಶ್ರೀ ವೆಂಕಯ್ಯ ನಾಯ್ಡು, ಈ ಹುದ್ದೆಗೇರಿದ ಸ್ವಾತಂತ್ರ್ಯ ನಂತರ ಜನಿಸಿದ ಮೊದಲ ವ್ಯಕ್ತಿ ಎಂಬ ಹಿರಿಮೆಗೂ ಅವರು ಪಾತ್ರರಾಗಿದ್ದಾರೆ. ಕಳೆದ 40 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿರುವ ಅವರು ಈಗ ಉಪರಾಷ್ಟ್ರಪತಿಯಾಗಿರುವುದನ್ನು ತಮಗೆ ಸಿಕ್ಕಿರುವ ಗೌರವ ಎಂದು ಭಾವಿಸಿದ್ದಾರೆ. ಉಪರಾಷ್ಟ್ರಪತಿ ಹುದ್ದೆ ವಿಭಿನ್ನವಾದುದು ಮತ್ತು ಅದರ ಕಾರ್ಯ ನಿರ್ವಹಣೆಯೇ ಬೇರೆಯಾದದ್ದು. ಈ ಹುದ್ದೆ ಪ್ರಾಮಾಣಿಕವಾಗಿ ನಿರ್ವಹಿಸುವುದಾಗಿ ಅವರು ನುಡಿದಿದ್ದಾರೆ.


ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಶಾ, ಗೃಹ ಸಚಿವ ರಾಜನಾಥ್ ಸಿಂಗ್, ವಿತ್ತ ಸಚಿವ ಅರುಣ್ ಜೇಟ್ಲಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ಈ ಹಿಂದೆ ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಖಾತೆಯ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದ ಇವರು, ಇತ್ತೀಚೆಗಷ್ಟೇ ನಡೆದ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಯುಪಿಎ ಅಭ್ಯರ್ಥಿ ಗೋಪಾಲಕೃಷ್ಣ ಗಾಂಧಿ ಅವರನ್ನು ಸೋಲಿಸಿ ಉಪರಾಷ್ಟ್ರಪತಿ ಹುದ್ದೆಗೆ ಆಯ್ಕೆಯಾಗಿದ್ದು, ಇಂದು ಪ್ರಮಾಣವಚನ ಸ್ವೀಕರಿಸಿದ್ದಾರೆ.


## ಹಿಂದಿನ ರಾಷ್ಟ್ರಪತಿಗಳು


ಡಾ. ರಾಜೇಂದ್ರ ಪ್ರಸಾದ್


ಡಾ. ಎಸ್. ರಾಧಾಕೃಷ್ಣನ್


ಡಾ. ಜಾಕಿರ್ ಹುಸೇನ್



ವರಾಹಗಿರಿ ವೆಂಕಟ ಗಿರಿ


ಫಕ್ರುದ್ದೀನ್ ಅಲಿ ಅಹ್ಮದ್


ನೀಲಂ ಸಂಜೀವ ರೆಡ್ಡಿ


ಗ್ಯಾನಿ ಜೈಲ್ ಸಿಂಗ್


ರಾಮಸ್ವಾಮಿ ವೆಂಕಟರಾಮನ್


ಡಾ. ಶಂಕರ ದಯಾಳ ಶರ್ಮ


ಡಾ. ಕೆ.ಆರ್ ನಾರಾಯಣನ್



ಡಾ. ಎಪಿಜೆ ಅಬ್ದುಲ್ ಕಲಾಮ್


ಪ್ರತಿಭಾ ಪಾಟೀಲ್


ಪ್ರಣಬ್ ಮುಖರ್ಜಿ

## ಹಿಂದಿನ ಉಪರಾಷ್ಟ್ರಪತಿಗಳು


ಡಾ. ಎಸ್. ರಾಧಾಕೃಷ್ಣನ್


ಡಾ. ಜಾಕಿರ್ ಹುಸೇನ್



ವರಾಹಗಿರಿ ವೆಂಕಟ ಗಿರಿ


ಗೋಪಾಲ ಸ್ವರೂಪ್‌ಪಾಠಕ್



ಬಸಪ್ಪ ದಾನಪ್ಪ ಜತ್ತಿ


ಮಹಮ್ಮದ್ ಇದಾಯತ್‌ವುಲ್ಲ



ರಾಮಸ್ವಾಮಿ ವೆಂಕಟರಾಮನ್


ಡಾ. ಶಂಕರ ದಯಾಳ ಶರ್ಮ


ಡಾ. ಕೆ.ಆರ್ ನಾರಾಯಣನ್


ಕೃಷ್ಣನ್ ಕಾಂತ್


ಭೈರೋನ್ ಸಿಂಗ್ ಶೇಖಾವತ್


ಹಮೀದ್ ಅನ್ಸಾರಿ

## 7 ದಿನಗಳ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ ಮುಕ್ತಾಯ

# ವೃತ್ತಿಪರತೆಗಾಗಿ ತರಬೇತಿ ಅವಶ್ಯಕ - ಶ್ರೀ ತೋಟಗ್ನಮ್ ಜಮಾಂಗ್



**ಬೆಂಗಳೂರು :** ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಗಳಿಗಾಗಿ 7 ದಿನಗಳ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ ಕಾರ್ಯಕ್ರಮದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದ ರಿಸರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜನರಲ್ ಮ್ಯಾನೇಜರ್ ಆದ ಶ್ರೀ ತೊಟಗ್ನಮ್ ಜಮಾಂಗ್‌ರವರು, ಸಹಕಾರ ಬ್ಯಾಂಕುಗಳ ಕೆಲಸ ಸುಲಭದ ಕೆಲಸವಲ್ಲ. ಗ್ರಾಹಕರು, ಆಡಳಿತ ಮಂಡಲಿ ಸದಸ್ಯರು ಹಾಗೂ ರಿಸರ್ವ್ ಬ್ಯಾಂಕು ಮತ್ತು ಸಹಕಾರ ಇಲಾಖೆಯವರೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತಾ ಗ್ರಾಹಕರಿಗೆ ಉತ್ತಮ ಸೇವೆಯನ್ನು ಒದಗಿಸುವುದು ಒಂದು ಸವಾಲು.

ಈ ಸವಾಲನ್ನು ಎದುರಿಸಲು ಸಿಬ್ಬಂದಿಯವರಿಗೆ ಭದ್ರವಾದ ತಳಪಾಯ ಇರಬೇಕಾಗುತ್ತದೆ. ಇದನ್ನು ಪಡೆಯಲು ಮತ್ತು ವೃತ್ತಿಪರತೆಯನ್ನು ಬೆಳೆಸಿಕೊಳ್ಳಲು ತರಬೇತಿ ಅಗತ್ಯವಾಗುತ್ತದೆ.

ಇಂತಹ ಕಾರ್ಯವನ್ನು ನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯನ್ನು ಅಭಿನಂದಿಸುತ್ತೇನೆ ಎಂದು ತಿಳಿಸಿದರು.

## ವಿಶ್ವಾಸಾರ್ಹತೆಯೇ ಸಾಧನೆಯ ಅಳತೆಗೋಲು – ಶ್ರೀ ಕೆ.ಎಸ್.ನವೀನ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಹಕಾರ ಇಲಾಖೆಯ ಅಪರ ನಿಬಂಧಕರಾದ ಶ್ರೀ ಕೆ.ಎಸ್.ನವೀನರವರು ಸಂಯುಕ್ತ ಸಹಕಾರಿಯ ಅನೇಕ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ.

ಕಾರ್ಯಕ್ರಮಗಳು ಶಿಸ್ತುಬದ್ಧವಾಗಿ, ಗುಣಾತ್ಮಕವಾಗಿ ನಡೆಯುತ್ತವೆ. ವಿಶೇಷವಾಗಿ ಸಮಯ ಪಾಲನೆಗೆ ಹೆಚ್ಚು ಒತ್ತು ಕೊಡುತ್ತಿರುವುದು ಅಭಿನಂದನೀಯ ಎಂದರು. ಕಾರ್ಯಕ್ರಮಗಳಲ್ಲಿ ಅಳವಡಿಸುವ ವಿಷಯಗಳು, ಸಂಪನ್ಮೂಲ ವ್ಯಕ್ತಿಗಳ ಆಯ್ಕೆ, ಶಿಬಿರಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ, ಶಿಬಿರಾರ್ಥಿಗಳು ತರಬೇತಿ ಅವಧಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವಂತೆ ಮಾಡುವುದು ಹೀಗೆ ಎಲ್ಲಾ ವಿಧದಲ್ಲೂ ತರಬೇತಿಯ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತಿರುವುದು ಸಂಯುಕ್ತ ಸಹಕಾರಿಯ ವಿಶೇಷ ಎಂದು ತಿಳಿಸಿ, ರಾಜ್ಯದ ಸೌಹಾರ್ದ ಸಹಕಾರಿ ವ್ಯಾಪ್ತಿಯ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿದಿದೆ. ಬ್ಯಾಂಕುಗಳು ಜನರ ವಿಶ್ವಾಸಾರ್ಹತೆಯನ್ನು ಗಳಿಸಿ ಕಾರ್ಯನಿರ್ವಹಿಸಿದಲ್ಲಿ ಪ್ರಗತಿಗೆ ಅಳತೆಗೋಲು ಎಂದು ತಿಳಿಸಿ ಶಿಬಿರಾರ್ಥಿಗಳಿಗೆಲ್ಲಾ ಶುಭಕೋರಿದರು.

ಪ್ರಾರಂಭದಲ್ಲಿ ಕುಮಾರಿ ನವ್ಯಶ್ರೀ ಯವರಿಂದ ಪ್ರಾರ್ಥನೆಯಾದ ನಂತರ ಸಂಯುಕ್ತ ಸಹಕಾರಿಯ ಕಿರಿಯ ಅಧಿಕಾರಿ ಶ್ರೀ ಆರ್.ಎಸ್.ಸುರೇಶರವರು ಸ್ವಾಗತಿಸಿದರು. ಶ್ರೀ ಸಂತೋಷ ಬಸಣ್ಣನವರ್ ಶಿಬಿರದ ವರದಿ ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ತರಬೇತಿಯ ಪ್ರಾಸ್ತಾವಿಕ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಉಪನಿರ್ದೇಶಕರಾದ ಶ್ರೀ ಷಡಕ್ಷರಿಯವರು, ರಿಸರ್ವ್ ಬ್ಯಾಂಕಿನ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣರವರು, ನಬಾರ್ಡ್‌ನ ನಿವೃತ್ತ ಅಧಿಕಾರಿ ಶ್ರೀ ವೈ.ವಿ.ಗುಂಡೂರಾವ್‌ರವರು, ಮಹಿಳಾ ಬ್ಯಾಂಕಿನ ಹಿರಿಯ ಅಧಿಕಾರಿ ಶ್ರೀಮತಿ ಯಮುನಾರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ಹಾಗೂ ವಿವಿಧ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿದ್ದಕ್ಕಾಗಿ ಬಹುಮಾನಗಳನ್ನು ಅತಿಥಿಗಣ್ಯರಿಂದ ವಿತರಿಸಲಾಯಿತು.

# ಶಿಬಿರಾರ್ಥಿಗಳ ಆಯ್ದ ಅನಿಸಿಕೆಗಳು

ಕೆಲಸಕ್ಕೆ ಹೊಸದಾಗಿ ಸೇರ್ಪಡೆಯಾದ ಸಿಬ್ಬಂದಿಗಳಿಗೆ ಅರ್ಥಪೂರ್ಣ ತರಬೇತಿ. – ಶಕುಂತಲಾ ಎಂ.

ತರಬೇತಿಯು ಅತ್ಯುತ್ತಮವಾಗಿತ್ತು. – ಅರ್ಚನ ಎಸ್.

ಈ ತರಬೇತಿ ಕೇವಲ ವೃತ್ತಿಯ ಜೀವನಕ್ಕೆ ಅಲ್ಲದೇ ವೈಯಕ್ತಿಕ ಜೀವನಕ್ಕೂ ಕೂಡ ಉಪಯೋಗವಾಗುವಂತಿದೆ. – ಅಶ್ವಿನಿ ಬಿ.

ಈ ತರಬೇತಿ ಸಮುದ್ರದಂತೆ – ಪ್ರಿಯದರ್ಶಿನಿ

ತರಬೇತಿ ಒಂದು ಮಾರ್ಗದರ್ಶಿ ಇದ್ದಂತೆ. – ನವ್ಯಶ್ರೀ ಹಿರೇಮಠ

ಅತ್ಯುತ್ತಮವಾದ ಕಾರ್ಯಕ್ರಮ. – ದೊಡ್ಡ ಬಸಪ್ಪ

ಸಂಪನ್ಮೂಲ ವ್ಯಕ್ತಿಗಳ ಮಾಹಿತಿ ಅತ್ಯುತ್ತಮವಾಗಿತ್ತು. – ಜಿ. ಸುಮಾ

ಅರ್ಥಗರ್ಭಿತವಾಗಿ, ಪ್ರೇರಣೆಯಾಗಿ, ಕಲಿಯುವ ಭರವಸೆಯಾಗಿದೆ. – ರಾಜಶೇಖರ ಶಿವಾನಂದ ಹೊಂಡದಕಟ್ಟಿ

ಅಲ್ಪಾವಧಿಯಲ್ಲಿ ದೊಡ್ಡ ಮಟ್ಟದ ಜ್ಞಾನವನ್ನು ಪಡೆದುಕೊಂಡೆವು. – ಜಿ. ಅಭಿನಯ

ಬ್ಯಾಂಕಿಂಗ್ ಮಾಹಿತಿ ತರಬೇತಿ ಕಾರ್ಯಕ್ರಮ "ಒಬ್ಬ ಬ್ಯಾಂಕರನ ದಾರಿ ದೀಪದ ಬೆಳವಣಿಗೆ". – ಶಿವಕುಮಾರ್

ತುಂಬ ಚೆನ್ನಾಗಿದೆ, ಸಾಕಷ್ಟು ಮಾಹಿತಿ ಕಲಿತೆವು. – ಶ್ರೀವಿದ್ಯಾ

ಅಂಧಕಾರದಿಂದ ಸನ್ಮಾರ್ಗದ ಕಡೆಗೆ ದಾರಿ ತೋರಿಸಿದೆ. – ಮಂಜುಳ ಎಂ.ವಿ.

ಈ ತರಬೇತಿಯು ನಮಗೆ ಅತ್ಯುತ್ತಮ ಹಾಗೂ ಸ್ಫೂರ್ತಿದಾಯಕತೆಯನ್ನು ನೀಡಿತು. – ಮಂಜುನಾಥ ಎಫ್.

ಜೀವನವೆಂದರೆ ಕೇವಲ ನಮಗಾಗಿ ಬದುಕಲು ಸೀಮಿತವಲ್ಲ ಎನ್ನುವುದನ್ನು ಕಲಿತೆ. – ಸಿದ್ಧನಗೌಡ ಪಾಟೀಲ್

ಕಾರ್ಯಕ್ರಮವು ತುಂಬಾ ಚೆನ್ನಾಗಿ ಮೂಡಿಬಂದಿದೆ. – ಕೆ. ವಿದ್ಯಾಶ್ರೀ

ಕಾನ್‌ಫಿಡೆನ್ಸ್ ಮೂಡಿತು. – ರಾಮಂಜಿನಿಯಲು ಎನ್.

ಕಷ್ಟದ ವಿಚಾರ/ ವಿಷಯವನ್ನು ಇಷ್ಟವಾಗುವಂತೆ ಹೇಳಿದರು. – ಸಚಿನ್ ಶೇಠ

ಅದ್ಭುತ ಅನುಭವ. – ಪೂಜಿತಾ ಪಿ.

ತರಬೇತಿಯ ವಿಷಯಗಳು ಆಸಕ್ತಿ ಮೂಡುವ ಹಾಗೇ ಇದ್ದವು.
– ದೊಡ್ಡಬಸವ ಹಿರೇಮಠ

ಅದ್ಭುತ, ಅನನ್ಯ, ಅಮೋಘ, ವಿವಿಧತೆಯಲ್ಲಿ ಏಕತೆಯನ್ನು ಮೂಡಿಸಿದೆ ಈ ತರಬೇತಿ.
– ಪ್ರಶಾಂತ ಎಸ್.ಬಿ.

ಹೊಸ ಅಭ್ಯರ್ಥಿಗಳಿಗೆ ಕಲಿಯಲು ಒಂದು ಉತ್ತಮವಾದ ವೇದಿಕೆಯಾಗಿದೆ.
– ನಾಗರಾಜು

ಈ ತರಬೇತಿಯಲ್ಲಿ ಭಾಗವಹಿಸಿದ್ದರಿಂದ ನಮಗೆ ಒಳ್ಳೆಯ ವಿಷಯಗಳು ಗೊತ್ತಾಗುತ್ತಿವೆ.
– ಶ್ರೀಜಯಕುಮಾರ

ಬ್ಯಾಂಕಿಂಗ್ ಕ್ಷೇತ್ರಕ್ಕೆ ಹೊಸಬನಾದ ನನಗೆ ಇದೊಂದು ಉತ್ತಮ ತರಬೇತಿ ಶಿಬಿರವಾಗಿತ್ತು. ಇಲ್ಲಿ ಕಲಿತುಕೊಂಡ ವಿಷಯಗಳು ನನ್ನ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉಜ್ವಲ ಜೀವನ ಕಟ್ಟಿಕೊಳ್ಳಲು ಸಹಾಯಕ.
– ಸಿದ್ದೇಶ್ ಎಸ್.ಕೆ.

ಇದು ನಮ್ಮ ಕೆರಿಯರ್ ಬೆಳವಣಿಗೆಗೆ ಅತ್ಯಂತ ಸಹಾಯಕವಾಗಿದೆ.
– ರಾಧ ಎಸ್.

ಸಮಯ ಪಾಲನೆ ಕಲಿತೆ.
– ಮಲ್ಲಿಕಾರ್ಜುನ

ಇದು ನಮ್ಮ ಬ್ಯಾಂಕಿಂಗ್ ಕೆರಿಯರ್ ಬೆಳವಣಿಗೆಗೆ ಅತ್ಯಂತ ಸಹಾಯಕವಾಗಿದೆ.
– ನಿವೇದಿತಾ ಜೆ.ಎಂ.

ಈ ತರಬೇತಿಗೆ ಮತ್ತೊಮ್ಮೆ ಬರಲು ಇಷ್ಟಪಡುತ್ತೇನೆ.
– ಕೆ. ಶಿವಕುಮಾರ

ಜ್ಞಾನವರ್ಧಕ
– ಚಂದ್ರಶೇಖರ್ ಬಿ.ಕೆ.

ಸಿಬಂದಿಗಳ ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ವೇದಿಕೆ. – ಶೃತಿ

ತರಬೇತಿ ಒಂದು ಮಾಹಿತಿಯ ಕಣಜ.
– ಶಾಂತಿ ಕೆ.

ಬ್ಯಾಂಕಿಂಗ್ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಅತ್ಯುತ್ತಮ ತರಬೇತಿಯಾಗಿತ್ತು.
– ಸುರೇಶ ಆರ್.ಎಸ್.

ಸಹಕಾರ ಮತ್ತು ಸಹಕಾರಿ ಬ್ಯಾಂಕುಗಳ ಬಗ್ಗೆ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳಲು ಸಹಕಾರಿಯಾಯಿತು.
– ಸಂತೋಷ ಬಸಣ್ಣವರ್

ನಮಗೆ ಅಗತ್ಯವಾದ ವಿಷಯ ತಿಳಿಯುವುದರ ಜೊತೆಗೆ ವ್ಯಕ್ತಿತ್ವ ವಿಕಸನದ ಬಗ್ಗೆ ತಿಳುವಳಿಕೆಯಾಗಿದೆ.
– ಕಾರ್ತಿಕ್ ಹೆಚ್.ಜಿ.

ಈ ತರಬೇತಿಯಿಂದ ಹೆಚ್ಚಿನ ಜ್ಞಾನ ವಿಕಾಸ, ಶ್ರದ್ಧೆ, ಬುದ್ಧಿ, ವಿನಯ ಅರಿತುಕೊಂಡಿದ್ದೇವೆ.
– ನವೀನ ಕುಮಾರ

## ಬಹುಮಾನಗಳ ವಿವರ

| | |
|---|---|
| ಉತ್ತಮ ಶಿಬಿರಾರ್ಥಿ ಪುರುಷರ ವಿಭಾಗ | ಶ್ರೀ ಸಿದ್ಧೇಶ ಎಸ್.ಕೆ., ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ |
| ಉತ್ತಮ ಶಿಬಿರಾರ್ಥಿ ಮಹಿಳೆಯರ ವಿಭಾಗ | ಶ್ರೀ ವಿದ್ಯಾ, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ |
| ಉತ್ತಮ ಪ್ರಾರ್ಥನೆ | ಕುಮಾರಿ ನವ್ಯಶ್ರೀ ಹಿರೇಮಠ, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ |
| ಉತ್ತಮ ಸುವಿಚಾರ | ಕುಮಾರಿ ರಾಧಾ ಎಸ್., ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ |
| ಉತ್ತಮ ಮಿಲಿ | ಕುಮಾರಿ ಅಶ್ವಿನಿ ಜಿ., ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ |
| ಉತ್ತಮ ಇನ್ಸ್ಟಂಟ್ ಮಿಲಿ | ಶ್ರೀ ಮಂಜುನಾಥ ಎಸ್., ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ |
| **ಉತ್ತಮ ತಂಡಗಳು** | |
| ಉತ್ತಮ ವರದಿ | ಭಗತಸಿಂಗ್ |
| ವ್ಯವಸ್ಥಾಪನೆ | ಸ್ವಾಮಿ ವಿವೇಕಾನಂದ |
| ಊಟೋಪಚಾರ | ಸಂಗೊಳ್ಳಿ ರಾಯಣ್ಣ |
| ಸಮಯ ಪಾಲನೆ | ಬಸವಣ್ಣ |
| **ಶಿಬಿರಾರ್ಥಿಗಳ ಮೌಲ್ಯಮಾಪನ** | |
| ಪ್ರಥಮ | ಶ್ರೀ ಸಮೀರ ಕೆ., ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ |
| ದ್ವಿತೀಯ | ಶ್ರೀ ವಿನಯ ಶಾಸ್ತ್ರಿ, ಶ್ರೀ ಚರಣ ಸೌಹಾರ್ದ ಸಹಕಾರಿ ಬ್ಯಾಂಕ್ |
| ತೃತೀಯ | ಶ್ರೀ ಸಚಿನ ಶೇಠ, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ |

ತರಬೇತಿ ಅವಧಿಯಲ್ಲಿ ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಮತ್ತು ಬೆಳಗಿನ ಅವಧಿಯಲ್ಲಿ ಯೋಗವನ್ನು ವ್ಯವಸ್ಥೆ ಮಾಡಲಾಗಿತ್ತು.

ತರಬೇತಿ ಅವಧಿಯಲ್ಲಿ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ಮತ್ತು ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿಯವರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುವುದರ ಜೊತೆಗೆ ಅವರೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡರು.

5 ಸೌಹಾರ್ದ ಸಹಕಾರಿ ಬ್ಯಾಂಕುಗಳು ಹಾಗೂ ಸಂಯುಕ್ತ ಸಹಕಾರಿಯ 2 ಅಧಿಕಾರಿಗಳು ಸೇರಿದಂತೆ ಒಟ್ಟು 70 ಶಿಬಿರಾರ್ಥಿಗಳು ಈ ತರಬೇತಿಯ ಪ್ರಯೋಜನ ಪಡೆದರು. ತರಬೇತಿ ಕಾರ್ಯಕ್ರಮ ಉತ್ತಮವಾಗಿತ್ತು ಎಂದು ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳಲ್ಲಿ ತಿಳಿಸಿದರು.



## ಅಭಿನಂದನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 2017 ರಿಂದ 2022ರ ಸಾಲಿಗೆ ನಿರ್ದೇಶಕ ಮಂಡಲಿಗೆ ದಿನಾಂಕ 28.07.2017 ರಂದು ಜರುಗಿದ ಚುನಾವಣೆಯಲ್ಲಿ ಬೆಳಗಾವಿ ಪ್ರಾಂತದ ಬೆಳಗಾವಿ ಜಿಲ್ಲೆಯಿಂದ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇದರ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ ಇವರು ನಿರ್ದೇಶಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾರ್ದಿಕ ಅಭಿನಂದನೆ ಕೋರಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ಹಾಗೂ ನಿರ್ದೇಶಕರುಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸಂವಾದ ಕಾರ್ಯಕ್ರಮ

ತರಬೇತಿ ಅವಧಿಯಲ್ಲಿ ಶಿಬಿರಾರ್ಥಿಗಳ ಅನುಕೂಲಕ್ಕಾಗಿ ರಿಸರ್ವ್ ಬ್ಯಾಂಕಿನ ಅಧಿಕಾರಿ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣರವರ ಉಪಸ್ಥಿತಿಯಲ್ಲಿ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಉಪನಿರ್ದೇಶಕರಾದ ಶ್ರೀ ಷಡಕ್ಷರಿಯವರು, ನಬಾರ್ಡ್‌ನ ನಿವೃತ್ತ ಅಧಿಕಾರಿ ಶ್ರೀ ವೈ.ವಿ. ಗುಂಡೂರಾವರವರು, ವಿಕಾಸ ಸೌಹಾರ್ದ ಸಹಕಾರ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಪ್ರಸನ್ನರವರು, ಸುಕೋ ಸೌಹಾರ್ದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ ಮಸ್ಕಿ ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಪರಿಮಳಾಚಾರ ಅಗ್ನಿಹೋತ್ರಿಯವರು, ಮಹಿಳಾ ಸಹಕಾರ ಬ್ಯಾಂಕಿನ ಶ್ರೀಮತಿ ಯಮುನಾರವರು ಭಾಗವಹಿಸಿ, ತಮ್ಮ ಸಂಶಯ ನಿವಾರಣೆ ಮಾಡಿಕೊಳ್ಳುವುದರ ಜೊತೆಗೆ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಭಿವೃದ್ಧಿಗೆ ಪೂರಕವಾಗುವ ಅನೇಕ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದುಕೊಂಡರು.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 1972 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 916 ಪ್ರಕರಣಗಳು ಸೇರಿದಂತೆ ಒಟ್ಟು 2888 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 1875 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 324 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 08 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 232 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 07 ಪ್ರಕರಣಗಳು ಇತ್ಯರ್ಥಗೊಂಡಿದೆ.

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪವಿಧಿಗಳನ್ವಯ ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕಾದ ಶಾಸನಬದ್ಧ ಕಾರ್ಯಗಳು

- **ಕಾಯ್ದೆ ಕಲಂ 30 (1) :** ಪ್ರತಿಯೊಂದು ಸಹಕಾರಿಯು ಪ್ರತಿ ವರ್ಷದ ಸೆಪ್ಟೆಂಬರ್ 25ರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.
- **ಕಾಯ್ದೆ ಕಲಂ 33 (8) :** ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಸೆಪ್ಟೆಂಬರ್ 01ರೊಳಗಾಗಿ ಸಂಯುಕ್ತ ಸಹಕಾರಿಗೆ, ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಹಣಕಾಸು ನೀಡುವ ಬ್ಯಾಂಕಿಗೆ ಅಥವಾ ಸಾಲ ನೀಡಿಕೆ ಏಜೆನ್ಸಿಗೆ ಮತ್ತು ಸದರಿ ಸಹಕಾರಿಯು ಯಾವುದೇ ಇತರ ಸಹಕಾರಿಯೊಡನೆ ಸಂಯೋಜಿತವಾಗಿದ್ದರೆ ಆ ಸಹಕಾರಿಗೆ ಕಳುಹಿಸತಕ್ಕದ್ದು.
- **ಕಾಯ್ದೆ ಕಲಂ 33 (10) :** ಸಹಕಾರಿಯ ಆಡಳಿತ ಮಂಡಲಿಯು ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಸಂಯುಕ್ತ ಸಹಕಾರಿಗೆ ಲೆಕ್ಕಪರಿಶೋಧನಾ ವರದಿಯ ಮೇಲೆ ತೆಗೆದುಕೊಂಡ ಕ್ರಮದ (ಅನುಪಾಲನಾ) ವರದಿಯನ್ನು ಸಲ್ಲಿಸತಕ್ಕದ್ದು.
- **ಕಾಯ್ದೆ ಕಲಂ 34 :** ಪ್ರತಿಯೊಂದು ಸಹಕಾರಿಯು ಸಹಕಾರ ವರ್ಷ ಮುಗಿದ ಆರು ತಿಂಗಳೊಳಗೆ (ಅಂದರೆ ಸೆಪ್ಟೆಂಬರ್ 30ರೊಳಗೆ) (ಎ) ಹಿಂದಿನ ಸಹಕಾರಿ ವರ್ಷದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿ ಮತ್ತು ಮುಂಬರುವ ಸಹಕಾರಿ ವರ್ಷದ ಬಗ್ಗೆ ಕಾರ್ಯಕ್ರಮ; (ಬಿ) ಲೆಕ್ಕಪತ್ರಗಳ ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳು; (ಸಿ) ಸಾಮಾನ್ಯ ನಿಕಾಯವು ಅನುಮೋದಿಸಿದಂತೆ ಹೆಚ್ಚುವರಿಯನ್ನು ವಿಲೆಮಾಡುವ ಬಗ್ಗೆ ಯೋಜನೆ; (ಡಿ) ನಿರ್ದೇಶಕರುಗಳ ಪಟ್ಟಿ ಹಾಗೂ ಅವರ ಪದಾವಧಿ; (ಇ) ಸಹಕಾರಿಯ ಉಪವಿಧಿಗಳ ತಿದ್ದುಪಡಿಗಳ ಪಟ್ಟಿ; ಮತ್ತು (ಎಫ್) ಸಾಮಾನ್ಯ ನಿಕಾಯದ ಸಭೆಯನ್ನು ಮತ್ತು ಚುನಾವಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ನಡೆಸಿದ ದಿನಾಂಕದ ಬಗ್ಗೆ ಘೋಷಣೆ; (ಜಿ) ಈ ಅಧಿನಿಯಮದ ಉಪಬಂಧಗಳಡಿ ರಿಜಿಸ್ಟ್ರಾರನು ಹಾಗೂ ಸಂಯುಕ್ತ ಸಹಕಾರಿಯು ಅಪೇಕ್ಷಿಸುವ ಇತರೆ ಯಾವುದೇ ಮಾಹಿತಿಗಳನ್ನು ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು ಮತ್ತು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ ರಿಸರ್ವ್ ಬ್ಯಾಂಕಿಗೆ ಸಹ ಒದಗಿಸತಕ್ಕದ್ದು.
- **ನಿಯಮ 6ಸಿ (14) :** ಮುಖ್ಯ ಕಾರ್ಯನಿರ್ವಾಹಕನು ಸಾಮಾನ್ಯ ಸಭೆಯು ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಡವಳಿಗಳ ದೃಢೀಕೃತ ಪ್ರತಿಯನ್ನು ರಿಜಿಸ್ಟ್ರಾರನಿಗೆ, ಸಂಯುಕ್ತ ಸಹಕಾರಿಗೆ, ಸಂಬಂಧಪಟ್ಟ ಹಣಕಾಸು ಬ್ಯಾಂಕಿಗೆ, ಸಂಬಂಧಪಟ್ಟ ಕ್ರೆಡಿಟ್ ಏಜೆನ್ಸಿಗೆ ಕಳುಹಿಸತಕ್ಕದ್ದು ಮತ್ತು ಸಹಕಾರಿಯ ಸೂಚನಾ ಫಲಕದಲ್ಲಿ ದೃಢೀಕೃತ ಪ್ರತಿಯನ್ನು ಪ್ರಕಟಿಸತಕ್ಕದ್ದು.
- **ನಿಯಮ 8ಬಿ (8) :** ಯಾವುದೇ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನೇಮಕಗೊಂಡ ಲೆಕ್ಕಪರಿಶೋಧಕನು/ ಲೆಕ್ಕಪರಿಶೋಧಿತ ಸಂಸ್ಥೆಗಳಿಗೆ ಸಾಮಾನ್ಯ ಸಭೆ ನಡೆಸಿದ ಏಳು ದಿವಸಗಳೊಳಗಾಗಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ತಿಳಿಸತಕ್ಕದ್ದು ಹಾಗೂ ಸದರಿ ಮಾಹಿತಿಯನ್ನು ಲೆಕ್ಕಪರಿಶೋಧನಾ ನಿರ್ದೇಶಕರಿಗೂ ಹಾಗೂ ಸಂಯುಕ್ತ ಸಹಕಾರಿಗೂ ಸಹಾ ತಿಳಿಸತಕ್ಕದ್ದು.
- **ನಿಯಮ 10ಎ :** ಪ್ರತಿ ಸಹಕಾರಿಯು ತನ್ನ ಸಹಕಾರ ನಿಧಿ ವಂತಿಕೆ (ಸಹಕಾರ ಶಿಕ್ಷಣ ನಿಧಿ)ಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ಖಾತೆಗೆ ತನ್ನ ವಾರ್ಷಿಕ ಸಾಮಾನ್ಯ ಸಭೆ ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಜಮಾ ಮಾಡತಕ್ಕದು.
- **ಕಾಯ್ದೆ ಕಲಂ 62 & ಸಂಯುಕ್ತ ಸಹಕಾರಿಯ ಉಪವಿಧಿ 38 :** ಪ್ರತಿಯೊಂದು ಸದಸ್ಯ ಸಹಕಾರಿಯು ಪ್ರತಿ ವರ್ಷ ಸೆಪ್ಟೆಂಬರ್ 30ರೊಳಗೆ ಹಿಂದಿನ ವರ್ಷಾಂತ್ಯಕ್ಕೆ ಇದ್ದ ಅದರ ದುಡಿಯುವ ಬಂಡವಾಳಕ್ಕೆ ಅನುಗುಣವಾಗಿ ವಾರ್ಷಿಕ ಶುಲ್ಕವನ್ನು ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು. ಆ ವರ್ಷದ ಡಿಸೆಂಬರ್ 31ರೊಳಗೆ ನೋಂದಣಿಗೊಂಡಿದ್ದಲ್ಲಿ ಆ ಸಾಲಿನ ಶುಲ್ಕವನ್ನು ಜನವರಿ 31ರೊಳಗೆ ಪಾವತಿಸಬೇಕು.

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕರ್ತವ್ಯಗಳು

ಆವಿಷ್ಕಾರ್ ಸೌಹಾರ್ದ ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಎಲ್ಲಾ ನಿರ್ದೇಶಕರು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 25(2)(ಎ-1), (ಬಿ) ಮತ್ತು (ಸಿ) ರಡಿ ಅನರ್ಹತೆಗೆ ಗುರಿಯಾಗಿರುವುದರಿಂದ ಇದರ ವಿಶೇಷಾಧಿಕಾರಿಯಾಗಿ ಶ್ರೀ ಸೂರ್ಯಕಾಂತ ರ್‍ಯಾಕಲೆ, ಅಧಿಕಾರಿ, ಬೆಂಗಳೂರು ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರನ್ನು ವಿಶೇಷಾಧಿಕಾರಿಯನ್ನಾಗಿ ನೇಮಕ ಮಾಡಿ, ದಿನಾಂಕ 04 ಆಗಸ್ಟ್ 2017ರಂದು ಆದೇಶ ಹೊರಡಿಸಲಾಗಿದೆ.

## ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ

ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 16 ಸೆಪ್ಟೆಂಬರ್ 2017ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಜ್ಯೋತಿ ಸಭಾಂಗಣ, ಪ್ಯಾಲೇಸ್ ರಸ್ತೆ, ಬೆಂಗಳೂರು-560009 (ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಹತ್ತಿರ) ಇಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿರುತ್ತದೆ. ಸಭೆಯ ನೋಟೀಸನ್ನು ಅರ್ಹ ಸದಸ್ಯ ಭಾಗವಹಿಸುವಿಕೆಗಾಗಿ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಲಾಗುವುದು ಹಾಗೂ ಅರ್ಹ ಸದಸ್ಯರ ಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು www.souharda.coop ನಲ್ಲಿ ಪ್ರಕಟಿಸಲಾಗುವುದು.

## ಬೆಂಗಳೂರು ವಿಭಾಗ



ಶ್ರೀ ಬಿ.ಎಸ್. ಗುಂಡುರಾವ್
ಬೆಂಗಳೂರು
ಮೊ : 9448491893



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಕೋಲಾರ
ಮೊ : 9972089407



ಶ್ರೀ ಬಿ. ಗಂಗಾಧರಯ್ಯ
ತುಮಕೂರು
ಮೊ : 9448660531



ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ
ಚಿತ್ರದುರ್ಗ
ಮೊ : 9448338872



ಶ್ರೀ ಜಿ. ನಂಜನಗೌಡ
ದಾವಣಗೆರೆ
ಮೊ : 9731347200



ಶ್ರೀ ಎ.ಆರ್. ಪ್ರಸನ್ನಕುಮಾರ್
ಶಿವಮೊಗ್ಗ
ಮೊ : 9482354391

## ಮೈಸೂರು ವಿಭಾಗ



ಶ್ರೀ ಹೆಚ್.ವಿ. ರಾಜೀವ್
ಮೈಸೂರು
ಮೊ : 9538884748



ಶ್ರೀ ಮಂಜುನಾಥ
ಉಡುಪಿ
9448348203

## ಬೆಳಗಾವಿ ವಿಭಾಗ



ಶ್ರೀ ಜಗದೀಶ ಕವಟಗಿಮಠ
ಬೆಳಗಾವಿ
ಮೊ : 9448084177



ಶ್ರೀ ಚಂದ್ರಕಾಂತ ಪಡಚಣ್ಣವರ
ಧಾರವಾಡ
ಮೊ : 9448823300



ಶ್ರೀ ಗುರುನಗೌಡ ಪಾಟೀಲ
ಬಾಗಲಕೋಟೆ
ಮೊ : 9448117966



ಶ್ರೀ ಸಿದ್ರಾಮಪ್ಪ ಉಪ್ಪಿನ
ವಿಜಯಪುರ
ಮೊ : 9448785113



ಶ್ರೀ ರಂಗಪ್ಪಯ್ಯ ದೇಶಪಾಂಡೆ
ಗದಗ
ಮೊ : 9448380165



ಶ್ರೀ ಮಾರುತಿ ಬಿ. ಕಲಾಲ
ಹಾವೇರಿ
ಮೊ : 9448745690



ಶ್ರೀಮತಿ ಸರಸ್ವತಿ
ಉತ್ತರ ಕನ್ನಡ
ಮೊ : 9449629939

## ಕಲಬುರಗಿ ವಿಭಾಗ



ಶ್ರೀ ಗುರುನಾಥ ಜ್ಯಾಂತಿಕರ
ಬೀದರ
ಮೊ : 9448270104



ಶ್ರೀ ಸಂಜೀವ ಮಹಾಜನ
ಕಲಬುರಗಿ
ಮೊ : 9972082380



ಶ್ರೀ ವಾಯ್. ಟಿ. ಪಾಟೀಲ
ಯಾದಗಿರಿ
ಮೊ : 9449838778



ಶ್ರೀ ಜಿ. ಶ್ರೀಧರ
ಕೊಪ್ಪಳ
ಮೊ : 9845256657



ಶ್ರೀ ಆರ್. ತಿಮ್ಮಯ್ಯಶೆಟ್ಟಿ
ರಾಯಚೂರು
ಮೊ : 9448489794



ಶ್ರೀ ವಿಶ್ವನಾಥ ಚ. ಹಿರೇಮಠ
ಬಳ್ಳಾರಿ
ಮೊ : 9448473025

# ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾಗಿ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಜಗದೀಶ ಕವಟಗಿಮಠ ಅವಿರೋಧ ಆಯ್ಕೆ



## ನೂತನ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ವ್ಯಕ್ತಿ ಪರಿಚಯ



ತುಮಕೂರು ಜಿಲ್ಲೆಯ ಪಾವಗಡದಲ್ಲಿ ದಿನಾಂಕ 20-07-1963ರಲ್ಲಿ ಜನನ. ತಂದೆ ಶ್ರೀ ಹೆಂಜಾರೆಡ್ಡಿ. ತಾಯಿ ಶ್ರೀಮತಿ ನಾರಮ್ಮ. 5 ಜನ ಗಂಡು ಮಕ್ಕಳಿರುವ ವಿದ್ಯಾವಂತ, ಕೃಷಿಕ, ಸುಸಂಸ್ಕೃತ ಕುಟುಂಬ. ಶ್ರೀಯುತರು ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಬಿ.ಇ. ಶಿಕ್ಷಣ ನಂತರದಲ್ಲಿ ಎ.ಎಮ್.ಐ.ಇ. ಪದವಿ ಪಡೆದು ಸಿವಿಲ್ ಇಂಜಿನಿಯರ್ ವೃತ್ತಿ ಆಯ್ಕೆ. ತುಮಕೂರು ಜಿಲ್ಲೆ ಗಡಿ ಭಾಗದ ಹಿಂದುಳಿದ ಹಾಗೂ ಬರಪೀಡಿತ ಪ್ರದೇಶವಾದ ಪಾವಗಡದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿರ್ಮೂಲನೆ ಮಾಡುವ ಹಾಗೂ ಸಾಮಾಜಿಕ ಕಳಕಳಿಯನ್ನು ಕಾಪಾಡುವ ಸದುದ್ದೇಶದೊಂದಿಗೆ ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಿ ಪ್ರಸಕ್ತ 300 ಜನರಿಗೆ ಉದ್ಯೋಗ, ಆಡಳಿತದಲ್ಲಿ 250 ಸದಸ್ಯರು ಭಾಗಿಯಾಗಿದ್ದು, ರಾಜ್ಯಾದ್ಯಂತ 30 ಶಾಖೆಗಳು ಹಾಗೂ 450 ಕೋಟಿ ವಹಿವಾಟನ್ನು ಹೊಂದಿರುತ್ತದೆ.

ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ವೈದ್ಯಕೀಯ ಹಾಗೂ ಪ್ರಕೃತಿ ವಿಕೋಪದಂತಹ ಅನೇಕ ಕಾರ್ಯಕ್ರಮಗಳಿಗೆ ಸಹಾಯ ಹಸ್ತ ನೀಡುವುದು, ಪಾವಗಡ ಮತ್ತು ಮಧುಗಿರಿಯಲ್ಲಿ 2 ವೃದ್ಧಾಶ್ರಮಗಳಿಗೆ ಉಚಿತವಾಗಿ ಪ್ರತಿ ತಿಂಗಳು ಖರ್ಚಾಗುವಷ್ಟು ಅಕ್ಕಿಯನ್ನು ಕೊಡುವುದು, ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹಿಸಲು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ಮಾಡುವುದು. ಬಡವರ ಹಾಗೂ ದೀನದಲಿತರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಈಗಾಗಲೇ ಪ್ರಗತಿ ವಿದ್ಯಾನಿಕೇತನ್ ವೆಲ್‌ಫೇರ್ ಸೊಸೈಟಿಯನ್ನು ಚಿತ್ರದುರ್ಗದಲ್ಲಿ ಶಾಲೆ ಪ್ರಾರಂಭಿಸಿರುವುದು. ದೇಶದ ಭ್ರಷ್ಟಾಚಾರವನ್ನು ತೊಲಗಿಸಲು ಅಣ್ಣಾ ಹಜಾರೆ ಕೈಗೊಂಡ ಆಂದೋಲನದಲ್ಲಿ ಪಾಲ್ಗೊಂಡು ಪ್ರಧಾನಮಂತ್ರಿಯವರ ಸ್ವಚ್ಛ ಭಾರತ್ ಕಾರ್ಯಕ್ರಮಗಳಲ್ಲಿ ಹಾಗೂ ಸಂಘ ಪರಿವಾರದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.

ಶ್ರೀಮತಿ ನಾರಮ್ಮ ಮತ್ತು ಶ್ರೀ ಹೆಂಜಾರೆಡ್ಡಿ ಚಾರಿಟಬಲ್ ಟ್ರಸ್ಟ್‌ನಿಂದ ಪ್ರತಿವರ್ಷ ಹೇಮಾವತಿಯಲ್ಲಿ ಸುಮಾರು 50,000 ಜನಕ್ಕೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಸತತ 15 ವರ್ಷಗಳಿಂದ ಆಯೋಜಿಸುತ್ತಿರುವುದು. ಬಡವರಿಗೆ ಸೂರು ಕಲ್ಪಿಸುವ ದೃಷ್ಟಿಯಿಂದ ಭಾರತಮಾತಾ ಗೃಹನಿರ್ಮಾಣ ಸಹಕಾರ ಸಂಘವನ್ನು ಸ್ಥಾಪಿಸಿರುವುದು, 2 ಕನ್‌ಸ್ಟ್ರಕ್ಷನ್ ಕಂಪನಿಗಳನ್ನು ಸ್ಥಾಪಿಸಿ ದೇಶ ಕಟ್ಟುವ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಹಾಗೂ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ, ಉಚಿತ ಕಣ್ಣಿನ ಆಪರೇಷನ್ ಈ ರೀತಿ ಅನೇಕ ಸಮಾಜಮುಖಿ ಚಟುವಟಿಕೆಗಳಲ್ಲಿ ಭಾಗವಹಿಸಿರುವುದು. ಶ್ರೀಯುತರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಅನೇಕ ಸಹಕಾರ ಸಂಸ್ಥೆಗಳನ್ನು ಹುಟ್ಟುಹಾಕಿದ್ದಾರೆ.

| | | |
|---|---|---|
| ಸಂಸ್ಥಾಪಕ ಅಧ್ಯಕ್ಷರು | : | ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ. |
| ಸಂಸ್ಥಾಪಕ ಅಧ್ಯಕ್ಷರು | : | ಭಾರತಮಾತಾ ಗೃಹನಿರ್ಮಾಣ ಸಹಕಾರ ಸಂಘ ನಿಯಮಿತ. |
| ವ್ಯವಸ್ಥಾಪಕ ಪಾಲುದಾರರು | : | ಬಿ.ಹೆಚ್.ಕೃಷ್ಣಾರೆಡ್ಡಿ ಮತ್ತು ಕೋ. |
| ವ್ಯವಸ್ಥಾಪಕ ನಿರ್ದೇಶಕರು | : | ಸೌಹಾರ್ದ ಇನ್‌ಫ್ರಾಟೆಕ್ ಪ್ರೈವೇಟ್ ಲಿಮಿಟೆಡ್. |
| ಕಾರ್ಯದರ್ಶಿ | : | ಶ್ರೀಮತಿ ನಾರಮ್ಮ ಮತ್ತು ಶ್ರೀ ಹೆಂಜಾರೆಡ್ಡಿ ಚಾರಿಟಬಲ್ ಟ್ರಸ್ಟ್. |
| ಕಾರ್ಯದರ್ಶಿ | : | ಪ್ರಗತಿ ವಿದ್ಯಾನಿಕೇತನ್ ಶಿಕ್ಷಣ ಸಂಸ್ಥೆ. |

ರಾಜ್ಯ ಮಟ್ಟದ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಸತತವಾಗಿ 3ನೇಯ ಬಾರಿಗೆ ಆಯ್ಕೆಯಾಗಿರುವ ಶ್ರೀಯುತರು ಪ್ರಸ್ತುತ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸಹಕಾರ ಕ್ಷೇತ್ರವನ್ನು ಪೂರ್ಣ ಸಂಘಟಿಸುವುದಕ್ಕಾಗಿ ಸಹಕಾರ ಕ್ಷೇತ್ರವು ಜನ ಸಾಮಾನ್ಯರು ಅಪೇಕ್ಷಿಸುವ ನೈಜ ಸಹಕಾರ ಚಳುವಳಿ ಆಗುವುದಕ್ಕಾಗಿ ಸಹಕಾರ ಕ್ಷೇತ್ರದಲ್ಲಿ ಸ್ವಾಯತ್ತತೆ, ಸ್ವಯಂ ಆಡಳಿತ ಮತ್ತು ಸ್ವಯಂ ನಿಯಂತ್ರಣಗಳ ಅಗತ್ಯದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನ ಸೌಹಾರ್ದ ಕಾಯ್ದೆಯ ಸಮಗ್ರ ತಿದ್ದುಪಡಿ ವಿಷಯದಲ್ಲಿ ಮತ್ತು ಅನೇಕ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಲ್ಲಿ, ತರಬೇತಿ ಕಾರ್ಯಕ್ರಮಗಳಲ್ಲಿ, ಸರ್ಕಾರ ಮನ್ನಣೆಗೊಳಿಸುವ, ಪ್ರವಾಸ ಕೈಗೊಳ್ಳುವ ಮತ್ತು ಸಹಕಾರ ಕ್ಷೇತ್ರವನ್ನು ಸಂಘಟಿಸುವ ಅತ್ಯಂತ ಪವಿತ್ರ ಕರ್ತವ್ಯದಲ್ಲಿ ಸಮರ್ಪಕ ಹಾಗೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ನೂತನ ಉಪಾಧ್ಯಕರಾದ ಶ್ರೀ ಜಗದೀಶ ಕವಟಗಿಮಠರವರ ವ್ಯಕ್ತಿ ಪರಿಚಯ



ಚಿಕ್ಕೋಡಿಯ ಕವಟಗಿಮಠ ಮನೆತನ ಕಳೆದ 3 ತಲೆಮಾರುಗಳಿಂದ ವೈವಿಧ್ಯಮಯವಾದ ಸೇವಾ ಕ್ಷೇತ್ರಗಳಿಂದ ಗುರುತಿಸಿಕೊಂಡಿರುವ ಮನೆತನ. ಸುಸಂಸ್ಕೃತ ಕೃಷಿ ಕುಟುಂಬ. ಈ ಮನೆತನದಲ್ಲಿ 1970ರ ಮೇ 09 ಜಗದೀಶರ ಜನ್ಮದಿನ. ಬಿ.ಎ.ಎಲ್.ಎಲ್.ಬಿ. ಪದವೀಧರರಾಗಿರುವ ಶ್ರೀಯುತರು ತಮ್ಮ ಪೂಜ್ಯ ತಂದೆಯವರಾದ ದಿ. ಶ್ರೀ ಎಂ.ಕೆ ಕವಟಗಿಮಠರವರು ಅವರ ಅಜ್ಜ ದಿವಂಗತ ಕಲ್ಲಯ್ಯಸ್ವಾಮಿಗಳು ತಂದೆ ಶ್ರೀ ದಿವಂಗತ ಶ್ರೀ ಮಲ್ಲಯ್ಯ ಸ್ವಾಮಿಗಳು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯುತ್ತಿರುವ ಪ್ರಗತಿಪರ ಯುವ ಸಹಕಾರಿ. ಪ್ರಥಮ ಬಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಬೆಳಗಾವಿ ವಿಭಾಗದಿಂದ ಆಯ್ಕೆಯಾಗಿರುವ ಶ್ರೀಯುತರು ಅವಿರೋಧವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಶ್ರೀಯುತರು ಶ್ರೀ ಸಿದ್ಧೇಶ್ವರ ಹಾಲು ಉತ್ಪಾದಕರ ಸಹಕಾರಿ ಸಂಘದ ಚಿಕ್ಕೋಡಿಯ ನಿರ್ದೇಶಕರಾಗಿ, ಜಿಲ್ಲಾ ಸಹಕಾರಿ ಯೂನಿಯನ್ ಬೆಳಗಾವಿಯ ಉಪಕಾರ್ಯಾಧ್ಯಕ್ಷರಾಗಿ, ಶ್ರೀ ನಾಗಲಿಂಗೇಶ್ವರ ಹೌಸಿಂಗ್ ಸೊಸಾಯಿಟಿ ಚಿಕ್ಕೋಡಿಯ ನಿರ್ದೇಶಕರಾಗಿ, ಕೆ.ಎಲ್.ಇ. ಕಾನೂನು ಮಹಾವಿದ್ಯಾಲಯ ಚಿಕ್ಕೋಡಿ ಇದರ ಸ್ಥಳೀಯ ಆಡಳಿತ ಮಂಡಳಿ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತು ಚಿಕ್ಕೋಡಿ ತಾಲ್ಲೂಕಾ ಘಟಕದ ಕೋಶಾಧ್ಯಕ್ಷರಾಗಿ, ಸಿ.ಎಲ್.ಇ. ಸಂಸ್ಥೆಯ ಹಳೆಯ ವಿದ್ಯಾರ್ಥಿ ಬಳಗದ ಸಂಸ್ಥಾಪಕ ಅಧ್ಯಕ್ಷರಾಗಿ, ಚಿಕ್ಕೋಡಿ ಪುರಸಭೆಯ ಅಧ್ಯಕ್ಷರಾಗಿ, ಸದಸ್ಯರಾಗಿ ಜೊತೆಗೆ ಹಲವಾರು ಸಂಘ ಸಂಸ್ಥೆಗಳಿಗೆ ಪದಾಧಿಕಾರಿಗಳಾಗಿ ಪ್ರೇರಕರಾಗಿ ಅವರು ಸಲ್ಲಿಸುತ್ತಿರುವ ಸೇವೆ ಅತ್ಯಂತ ಸ್ಮರಣೀಯವಾಗಿದೆ.

ಚಿಕ್ಕೋಡಿಯ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಿರುವ ಶ್ರೀಯುತರು ಸಾಯಿ ಪರಿವಾರದ ಮೂಲಕ ಪ್ರತಿ ವರ್ಷ ಉಚಿತ ಸಾಮೂಹಿಕ ವಿವಾಹ, ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳ ಹಂಚಿಕೆ, ಸಾಯಿ ಮಂದಿರದ ವಾರ್ಷಿಕೋತ್ಸವದ ಕಾಲಕ್ಕೆ ಮೂರು ದಿನಗಳ ಮಟ್ಟಿಗೆ ಹಮ್ಮಿಕೊಳ್ಳುವ ವಿವಿಧ ವಿಧಾಯಕ ಕಾರ್ಯಕ್ರಮಗಳು ಈ ಭಾಗದ ಜನರ ಮನ, ಮನೆಗಳಿಗೆ ಮೆಚ್ಚುಗೆಯಾಗಿವೆ. ಕಳೆದ 15 ವರ್ಷಕ್ಕೂ ಮಿಕ್ಕಿ ಕನ್ನಡ ಸಾಹಿತ್ಯ ಪರಿಷತ್ತು ಈ ಗಡಿಭಾಗದಲ್ಲಿ ಸಕ್ರಿಯವಾಗಿರುವುದರ ಜೊತೆಗೆ ಅದು ಹಲವು ಕಾರ್ಯಕ್ರಮಗಳನ್ನು ಹಾಗೂ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲು ಇವರು ಪ್ರೇರಕರಾಗಿದ್ದಾರೆ. ಇಂದು ಈ ಭಾಗದಲ್ಲಿ ಯಾವುದೇ ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾದರೆ ಅದಕ್ಕೆ ಇವರ ಉಪಸ್ಥಿತಿ, ಮಾರ್ಗದರ್ಶನ, ಮುಖಂಡತ್ವ ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ಶ್ರೀಯುತರು ತೊಡಗಿಸಿಕೊಂಡಿದ್ದಾರೆ.

ಶ್ರೀಯುತರು ದಿ.ಚಿಕ್ಕೋಡಿ ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ನಿ., ನಿಪ್ಪಾಣಿ ಇದರ ಅಧ್ಯಕ್ಷರಾಗಿ ಕಳೆದ ಎರಡು ಅವಧಿಗಳಿಗೆ ಇದನ್ನು ಮುನ್ನಡೆಸುತ್ತಿದ್ದಾರೆ. ದಾಖಲೆ ಪ್ರಮಾಣದ ಲಾಭಗಳಿಕೆಯನ್ನು ಇದಕ್ಕೆ ತಂದು ಕೊಟ್ಟಿದ್ದಾರೆ. ಸಂಘದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಬರೆದಿದ್ದಾರೆ. ಚಿಕ್ಕೋಡಿಯ ರಾಜೀವನಗರದ ನಿವೇಶನದಲ್ಲಿ ಇಂಡಿಯನ್ ಆಯಿಲ್ ಡೀಲರ್‌ಶೀಪ್‌ನ್ನು ಪಡೆಯುವುದರ ಮೂಲಕ ಸಂಘವು ಪೆಟ್ರೋಲ್ ಪಂಪ್ ನಡೆಸಲು ಕಾರಣೀಭೂತರಾಗಿದ್ದಾರೆ. ಈ ಮೂಲಕ ಅದರ ಆರ್ಥಿಕ ಚಟುವಟಿಕೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ.

ಯುವಕರು ಸಮಾಜದ ಆಧಾರ ಸ್ತಂಭಗಳು, ಆಶಾಜ್ಯೋತಿಗಳು, ಅವರ ಉತ್ಸಾಹ, ಕಲ್ಪನಾ ಶಕ್ತಿ ಹಾಗೂ ಕ್ರಿಯಾಶೀಲತೆ ಸಮಾಜ ನಿರ್ಮಾಣ ಕಾರ್ಯಕ್ಕೆ ಪೂರಕವಾಗಿವೆ ಎಂಬಲ್ಲಿ ಎರಡು ಮಾತಿಲ್ಲ. ಇಂದು ಯುವಕರಿಗೆ ಬೇಕಾಗಿರುವುದು ಒಳ್ಳೆಯ ಶಿಕ್ಷಣ, ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳಬೇಕು. ಅಂತಹ ಶಿಕ್ಷಣವನ್ನು ಶಿಕ್ಷಣ ಸಂಸ್ಥೆಗಳು ನೀಡಬೇಕೆಂಬ ನಿಟ್ಟಿನಲ್ಲಿ ಶ್ರೀಯುತರು ಸಿ.ಎಲ್.ಇ. ಶಿಕ್ಷಣ ಸಂಸ್ಥೆ ಚಿಕ್ಕೋಡಿಯ ಒಬ್ಬ ಕ್ರಿಯಾಶೀಲ ಕಾರ್ಯದರ್ಶಿಯಾಗಿ ಕೈಗೊಂಡಿರುವ ಕ್ರಮಗಳು ಗಮನಾರ್ಹವಾಗಿವೆ. ಸಂಸ್ಥೆಯು ತನ್ನ ಹದಿನಾಲ್ಕನೇಯ ಅಂಗ ಸಂಸ್ಥೆಯಾಗಿ 2012ರಲ್ಲಿ ಆರಂಭಿಸಿರುವ ಸಿ.ಎಲ್.ಇ. ಸಂಸ್ಥೆಯ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯವು ಅವರ ಕನಸಿನ ಆಶೋತ್ತರಗಳ ದ್ಯೋತಕವಾಗಿ ಬೆಳೆದು ನಿಂತಿದೆ.

ಶ್ರೀಯುತರು ಚಿಕ್ಕೋಡಿಯ ಡಾ.ಪ್ರಭಾಕರ ಕೋರೆ ನಗರದಲ್ಲಿ ಜನವರಿ 2014ರಲ್ಲಿ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಟ್ಟುಹಾಕಿದ್ದಾರೆ. ಅವರ ಸಮರ್ಥ, ದಕ್ಷ ಹಾಗೂ ಚಾಣಾಕ್ಷ ಆರ್ಥಿಕ ಯೋಚನೆ, ಯೋಜನೆಗಳ ಫಲವಾಗಿ ಕಳೆದ ಒಂದೆರಡು ತಿಂಗಳಲ್ಲಿ ಈ ಸಂಸ್ಥೆಯು ನಿಪ್ಪಾಣಿ, ಸವದತ್ತಿ, ಬೈಲಹೊಂಗಲ ಹಾಗೂ ರಾಮದುರ್ಗದಲ್ಲಿ ತನ್ನ ಶಾಖೆಗಳನ್ನು ಆರಂಭಿಸುವಂತಾಗಿದೆ. ಇಂದಿನ ಸ್ಪರ್ಧಾತ್ಮಕ ಆರ್ಥಿಕ ವಲಯದಲ್ಲಿ ಇದೊಂದು ಅಸಾಮಾನ್ಯ ಸಾಧನೆಯಾಗಿದೆ. ಯುವಕರಲ್ಲಿ ಅಡಗಿರುವ ಅಪಾರ ಪ್ರಮಾಣದ ಶಕ್ತಿ ಸಾರ್ಥಕವಾಗಿ, ಸಮಾಜಮುಖಿಯಾಗಿ ಪ್ರವಹಿಸಿದರೆ ದೇಶ, ನಾಡು, ಸಮಾಜ, ಸಾಂಸ್ಕೃತಿಕವಾಗಿ, ಸಫಲವಾಗಿ ಬೆಳೆಯಬೇಕು ಎಂಬುದು ಶ್ರೀಯುತರ ಮಹತ್ವಾಕಾಂಕ್ಷೆ. ಆ ನಿಟ್ಟಿನಲ್ಲಿ ಶ್ರೀಯುತರ ಕಾರ್ಯವೈಖರಿ.

### ಸನ್ಮಾನ



ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟ ರಿಟರ್ನಿಂಗ್ ಅಧಿಕಾರಿಯಾದ ಶ್ರೀ ಬಿ.ವೆಂಕಟೇಶ್ ಹಾಗೂ ಸಹಾಯಕ ರಿಟರ್ನಿಂಗ್ ಅಧಿಕಾರಿಯಾದ ಶ್ರೀಮತಿ ಬಿ. ಶಶಿಕಲಾ ಇವರುಗಳಿಗೆ ಸಂಯುಕ್ತ ಸಹಕಾರಿ ಪರವಾಗಿ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರಿಂದ ಸನ್ಮಾನ ಮಾಡಲಾಯಿತು.



# ರಾಜ್ಯದ ಹಿರಿಯ ಸಹಕಾರಿ ಶ್ರೀ ರಮೇಶ ವೈದ್ಯರವರಿಗೆ ಸಹಕಾರಿ ಕ್ಷೇತ್ರದ ಪ್ರತಿಷ್ಠಿತ "ಇಫ್ಕೋ ರೈತ ಬಂಧು" ಪ್ರಶಸ್ತಿ

ರಾಷ್ಟ್ರದ ಸಹಕಾರಿ ಕ್ಷೇತ್ರದ ಪ್ರತಿಷ್ಠಿತ ಇಫ್ಕೋ ಸಂಸ್ಥೆಯು ಪ್ರತಿವರ್ಷ ದೇಶದ ಉತ್ತಮ ಸಹಕಾರಿಗಳನ್ನು ಗುರುತಿಸಿ ಗೌರವಿಸುತ್ತದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದ ಹಿರಿಯ ಸಹಕಾರಿ ಶ್ರೀ ರಮೇಶ ವೈದ್ಯರವರನ್ನು ಆಯ್ಕೆ ಮಾಡಿರುವುದು ರಾಜ್ಯದ ಸಹಕಾರಿ ಕ್ಷೇತ್ರದವರಿಗೆಲ್ಲಾ ಸಂತಸ ತಂದಿದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ಸಿಬ್ಬಂದಿಯವರು ಹಾಗೂ ಸ್ವಾಭಿಮಾನಿ ಸಹಕಾರಿಯು ಶ್ರೀಯುತರನ್ನು ಅಭಿನಂದಿಸುತ್ತದೆ.

ಸಹಕಾರ ಬಂಧು ಶ್ರೀ ರಮೇಶ ವೈದ್ಯರವರು 1950 ಜುಲೈ 08 ರಂದು ಕೊಪ್ಪಳ ಜಿಲ್ಲೆಯ ಹಿಟ್ನಾಳ ಗ್ರಾಮದ ಕೃಷಿಕ ಹಾಗೂ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದವರು. ವಿಜ್ಞಾನ ಪದವೀಧರರು. ಸಹಕಾರ ಕ್ಷೇತ್ರದಲ್ಲಿ 1981 ರಿಂದ 1983ರವರೆಗೆ ಇಗಳಕೇರಾ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ, ರಾಯಚೂರು ಜಿಲ್ಲಾ ಸಹಕಾರ ಯೂನಿಯನ್‌ನ ಉಪಾಧ್ಯಕ್ಷರಾಗಿ, 1999 ರಿಂದ 2016ರವರೆಗೆ ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕರಾಗಿ ನಂತರ ಉಪಾಧ್ಯಕ್ಷರಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತರು ಕೊಪ್ಪಳ ಜಿಲ್ಲಾ ತೋಟದ ಬೆಳೆಗಾರರ ಸಹಕಾರ ಸಂಘದ ಸಂಸ್ಥಾಪಕ ಸದಸ್ಯರಾಗಿ ನಂತರ ನಿರ್ದೇಶಕರಾಗಿ ಆಯ್ಕೆಯಾಗಿ ನಂತರದಲ್ಲಿ ರಾಜ್ಯ ತೋಟಗಾರಿಕಾ ಸಹಕಾರ ಮಹಾಮಂಡಳದ ನಿರ್ದೇಶಕರಾಗಿ 2014 ರಿಂದ 2019ರವರೆಗೆ ಆಯ್ಕೆಯಾಗಿದ್ದಾರೆ.

2004 ರಿಂದ 2009ರವರೆಗೆ ಇಫ್ಕೋ ಸಂಸ್ಥೆಯ ಮಹಾ ಸಭೆಯ ಪ್ರತಿನಿಧಿ ಸದಸ್ಯರಾಗಿ, 2009 ರಿಂದ 2014ರವರೆಗೆ ಇಫ್ಕೋ ಸಂಸ್ಥೆಯ ಮಹಾ ಸಭೆಯ ಪ್ರಾಂತೀಯ ಪ್ರತಿನಿಧಿ ಸದಸ್ಯರಾಗಿ, ಸಹಕಾರ ಭಾರತಿಯ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ರಾಷ್ಟ್ರೀಯ ಕೃಷಿ ವಿಜ್ಞಾನ ಸಂಶೋಧನಾ ಸಂಸ್ಥೆಯ (ICAR) ಸದಸ್ಯರಾಗಿ 2003 ರಿಂದ 2006ರವರೆಗೆ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು 2007ರಲ್ಲಿ ಸಹಕಾರ ಶ್ರೇಷ್ಠ ಮತ್ತು 2008ರಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ಸಹಕಾರ ಕ್ಷೇತ್ರ ಸಾಮಾನ್ಯ ಜನರಿಗೆ ಸೇವೆ ಸಲ್ಲಿಸುವ ಅವಕಾಶ ಕಲ್ಪಿಸುವ ಉತ್ತಮ ವೇದಿಕೆ. ಸಮಾಜ ಸೇವೆಯೂ ಆಗುತ್ತದೆ ಹಾಗೂ ವೈಯಕ್ತಿಕ ಬೆಳವಣಿಗೆಯೂ ಆಗುತ್ತದೆ.

ಈ ಕ್ಷೇತ್ರ ದೇಶದ ಅಭಿವೃದ್ಧಿಯಲ್ಲಿ ಸಾಕಷ್ಟು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಯುವಕರು ಹಾಗೂ ಮಹಿಳೆಯರು ಸಹಕಾರ ಕ್ಷೇತ್ರಕ್ಕೆ ಹೆಚ್ಚಿಗೆ ಬರಬೇಕು. ಈ ಕ್ಷೇತ್ರದ ಪ್ರಯೋಜನ ಪಡೆಯಬೇಕು. ದೇಶದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕು ಎಂಬುದಾಗಿ ಶ್ರೀಯುತರು ಅಭಿಪ್ರಾಯಪಡುತ್ತಾರೆ.

ಶ್ರೀ ಕೆ.ಹೆಚ್.ಪಾಟೀಲ್ 1984-85, ಶ್ರೀ ಆರ್.ಎಮ್.ಪಾಟೀಲ್ 1999-2000, ಶ್ರೀ ಬಿ.ನಾರಾಯಣ ನಾಯಕ 1991-92, ಶ್ರೀ ವಾರಣಾಸಿ ಸುಬ್ಬರಾಯಭಟ್ಟ್ 2004-05, ಶ್ರೀ ಎಮ್.ಸಿ.ನಾಣಯ್ಯ 2001-02 ಇವರುಗಳು ಈ ಮೊದಲು ಕರ್ನಾಟಕದಿಂದ ಇಫ್ಕೋ ಪ್ರಶಸ್ತಿ ಪುರಸ್ಕೃತ ಸಹಕಾರಿಗಳು.



ಕುಂಭಕಲ್ಪ ಸೌಹಾರ್ದ ಸಹಕಾರಿ ನಿ., ಹಿರೇಪೇಟೆ, ಹುಬ್ಬಳ್ಳಿ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆ.




ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಾಗರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



ಶ್ರೀ ಕನ್ನಿಕ ಸೌಹಾರ್ದ ಸಹಕಾರಿ ನಿ., ಹಿರಿಯೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಾರ್ದ ತರಬೇತಿ ಕೇಂದ್ರ, ನೌಬಾದ, ಬೀದರನಲ್ಲಿ ಶ್ರೀ ಗುರುನಾಥ ಜ್ಯಾಂತಿಕರ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

## ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ ಸಹಕಾರಿಯ 2016–17ನೇ ಸಾಲಿನ 8ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 16.07.2017ರಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಸಭಾಂಗಣ, ಯಲಹಂಕ ಉಪನಗರ ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಮುನಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು 2016–17ನೇ ಸಾಲಿನಲ್ಲಿ ರೂ. 2,44,82,358/– (ಎರಡು ಕೋಟಿ ನಲವತ್ನಾಲ್ಕು ಲಕ್ಷದ



ಎಂಭತ್ತೆರಡು ಸಾವಿರದ ಮುನ್ನೂರ ಐವತ್ತೆಂಟು ಮಾತ್ರ)ಗಳ ನಿವ್ವಳ ಲಾಭವನ್ನು ಗಳಿಸಿದ್ದು, ಶೇ.15ರಂತೆ ಡಿವಿಡೆಂಡ್‌ನ್ನು ಘೋಷಿಸಲಾಯಿತು.

## ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆ



**ಕೋಡಿ ಕನ್ಯಾಣ :** ದಿನಾಂಕ 30 ಜುಲೈ 2017ರಂದು ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಡಿ ಕನ್ಯಾಣ ಇದರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಭು ಶಂಕರರವರ ಅಧ್ಯಕ್ಷತೆಯಲ್ಲಿ ಆಡಳಿತ ಕಛೇರಿಯಲ್ಲಿ ಜರಗಿತು.

ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಘವೇಂದ್ರ ಕರ್ಕೇರ ಅವರು ವರದಿ ವಾಚಿಸಿ, ಸಂಸ್ಥೆಯು ಆರಂಭಗೊಂಡು ಕೇವಲ 3 ವರ್ಷಗಳಲ್ಲಿ ಕ್ಷಿಪ್ರಗತಿಯಲ್ಲಿ ಬೆಳವಣಿಗೆ ಕಂಡಿದ್ದು, ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ರೂ. 267 ಲಕ್ಷಗಿಂತಲೂ ಅಧಿಕ ದುಡಿಯುವ ಬಂಡವಾಳವನ್ನು ಹೊಂದಿದೆ, ರೂ. 5 ಲಕ್ಷಕ್ಕೂ ಅಧಿಕ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.10ರಷ್ಟು ಡಿವಿಡೆಂಡ್ ನೀಡುವುದಾಗಿ ಘೋಷಿಸಿದರು.

7ನೇ ತರಗತಿ, ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳನ್ನು ಸನ್ಮಾನಿಸುವುದರೊಂದಿಗೆ ಸ್ಕಾಲರ್‌ಶಿಪ್ ವಿತರಿಸಲಾಯಿತು. ಸಹಕಾರಿಯ ಪೂರ್ಣ ಮಾಹಿತಿಯನ್ನು ಒಳಗೊಂಡ **www.srvssn.in website** ಅನ್ನು ಲೋಕಾರ್ಪಣೆಗೊಳಿಸಲಾಯಿತು.

ಇದೇ ಸಂದರ್ಭ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಮಂಜುನಾಥ ಎಸ್.ಕೆ. ಇವರಿಗೆ ಸನ್ಮಾನಿಸಲಾಯಿತು.

## ಉಪವಿಧಿ ತಿದ್ದುಪಡಿ (ಬೈಲಾ) ಕುರಿತು ತರಬೇತಿ ಕಾರ್ಯಾಗಾರ

**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಮತ್ತು ವಿಕಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕಾರ್ಕಳ ಇವರ ಜಂಟಿ ಆಶ್ರಯದಲ್ಲಿ ತರಬೇತಿಯಿಂದ ಅಭಿವೃದ್ಧಿ ಎಂಬ ಆಶಯದೊಂದಿಗೆ ಜಿಲ್ಲೆಯ ಸಹಕಾರಿಗಳಿಗೆ "ಉಪವಿಧಿ ತಿದ್ದುಪಡಿ (ಬೈಲಾ)" ಕುರಿತು ತರಬೇತಿಯು ನೈವೇದ್ಯ ಹೋಟೆಲ್‌ನ ಅನುಗ್ರಹ ಸಭಾಂಗಣದಲ್ಲಿ ನಡೆಯಿತು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಬೋಳಾ ಸದಾಶಿವ ಶೆಟ್ಟಿರವರು "ತರಬೇತಿ ಒಂದು ಸಂಸ್ಥೆಯನ್ನು ಬೆಳೆಸುತ್ತದೆ" ಎಂದರು. ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ ಎಸ್.ಕೆ.ರವರು ವಹಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಪಂಚಗಂಗಾವಳಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಗಂಗೊಳ್ಳಿ ಇದರ ಅಧ್ಯಕ್ಷರಾದ ರಾಜು ದೇವಾಡಿಗ, ಕರ್ನಾಟಕ ರಾಜ್ಯ ಸೌಹಾರ್ದ



ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿದ್ದ ಶ್ರೀ ಭಾಸ್ಕರಕಾಮತ್ ಇವರುಗಳು ಆಗಮಿಸಿದ್ದರು. "ಉಪವಿಧಿ ತಿದ್ದುಪಡಿಯ ಕುರಿತು" ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳಾದ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಶಶಿಧರ ಎಲೆರವರು ನೀಡಿದರು.



## ದಿ ಸನ್‌ಸ್ಟಾರ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ನ 5ನೇ ವಾರ್ಷಿಕ ಸಾಮಾನ್ಯ ಸಭೆ

**ಬೆಂಗಳೂರು :** ದಿ ಸನ್‌ಸ್ಟಾರ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 30.07.2017ರಂದು ಸಹಕಾರಿಯ ಕಛೇರಿ ಆವರಣದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳನ್ನು ಸನ್ಮಾನಿಸಲಾಯಿತು ಹಾಗೂ ಸಹಕಾರಿಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು.

## ತರಬೇತಿ ಕಾರ್ಯಾಗಾರ

**ಬೆಂಗಳೂರು :** ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ ನಿರ್ದೇಶಕರುಗಳಿಗೆ ದಿನಾಂಕ 08 ರಿಂದ 09 ಜುಲೈ 2017ರವರೆಗೆ ಆರ್‌ಐಸಿಎಂ, ಬೆಂಗಳೂರು ಇಲ್ಲಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ವಹಿಸಿದ್ದರು. ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಆರ್‌ಐಸಿಎಂನ ಪ್ರಾಂತೀಯ ನಿರ್ದೇಶಕರಾದ ಶ್ರೀ ಬಿ.ವಸಂತ್ ನಾಯಕ್ ಮತ್ತು ಸಹಕಾರ ಇಲಾಖೆಯ ಜಂಟಿ ನಿಬಂಧಕರು, ಕಾನೂನು ಕೋಶ ಶ್ರೀ ಜಿ.ಎಸ್.ಬಾಲಶೇಖರ್‌ರವರು ಆಗಮಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಎಸ್.ಎ.ಸಿದ್ಧಾಂತಿ, ಡಾ. ಬಿ.ಹರೀಶ್, ಶ್ರೀ ನಂದೀಶ್ ಹಿರೇಮಠ ಮತ್ತು ಸಂಯುಕ್ತ ಸಹಕಾರಿಯ ವತಿಯಿಂದ



ಶ್ರೀ ವೈ.ಕುಮಾರ್ ಹಾಗೂ ಶ್ರೀ ರಘುನಂದನ್‌ರವರು ಆಗಮಿಸಿ, ತರಬೇತಿ ನೀಡಿದರು. ಯೋಗಾಸನ ತರಬೇತಿಯನ್ನು ಶ್ರೀ ಮಂಜುನಾಥ್‌ರವರು ನೀಡಿದರು. ಸಮಾರೋಪ ಸಮಾರಂಭಕ್ಕೆ ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ನವೀನ್ ಮತ್ತು ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಎಂ.ಪಿ.ಮಂಜುನಾಥ್‌ರವರು ಅತಿಥಿಗಳಾಗಿ ಆಗಮಿಸಿದ್ದರು.



## ಶೇರು ಪತ್ರ ವಿತರಣಾ ಸಮಾರಂಭ

**ಮೈಸೂರು :** ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಸಹಕಾರಿಯ ಸದಸ್ಯರುಗಳಿಗೆ ಶೇರು ಪತ್ರ ವಿತರಣೆ ಮಾಡಲಾಯಿತು. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕೆ.ಆರ್. ಕ್ಷೇತ್ರದ ಶಾಸಕರಾದ ಶ್ರೀ ಸೋಮಶೇಖರ್ ಮತ್ತು ಮೈಸೂರು ವಿಭಾಗೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ್ ಬಿರಾದಾರ್‌ರವರು ಆಗಮಿಸಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಎನ್.ನವೀನ್‌ರವರು ಅಧ್ಯಕ್ಷತೆ ವಹಿಸಿದ್ದರು.

## ಶಾಖೆಯ ಉದ್ಘಾಟನೆ

ಸೂರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಲಗೇರಿ ಸಹಕಾರಿಯ 5ನೇ ಶಾಖೆಯನ್ನು ಮುದಗಾ ಗ್ರಾಮದ ಹಿರಿಯರಾದ ಶ್ರೀ ನಾಗಪ್ಪ ದುರ್ಗೇಕರರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜ ನಾಯಕ, ಉಪಾಧ್ಯಕ್ಷರಾದ ಶ್ರೀ ಸಂಜೀವ ನಾಯಕ ಸೇರಿದಂತೆ ನಿರ್ದೇಶಕರು ಹಾಗೂ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.





## ಸಹಕಾರಿಯ ಉದ್ಘಾಟನೆ

**ತುಮಕೂರು :** ಅಟವಿ ಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು ಸಹಕಾರಿಯನ್ನು ಶ್ರೀ ಮ.ನಿ.ಪ್ರ.ಸ್ವ. ಅಟವಿ ಶಿವಲಿಂಗ ಮಹಾಸ್ವಾಮಿಗಳು, ಮಠಾಧ್ಯಕ್ಷರು, ಚಿಕ್ಕತೊಟ್ಲುಕೆರೆ ಇವರು ಉದ್ಘಾಟಿಸಿದರು. ನಂತರ ಡಾ. ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು, ಮಠಾಧ್ಯಕ್ಷರು, ಹಿರೇಮಠ, ತುಮಕೂರು ಇವರು ಆಡಳಿತ ಮಂಡಲಿ ಸದಸ್ಯರು ಮತ್ತು ಸರ್ವಸದಸ್ಯರಿಗೆ ಶುಭ ಹಾರೈಸಿ, ಆಶೀರ್ವಚನವನ್ನು ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಎನ್.ಆರ್.ಜಗದೀಶ್, ಶ್ರೀಮತಿ ಮಂಜುಳ ನಿರಂಜನ್, ಶ್ರೀ ಟಿ.ಎಂ.ಯೋಗೀಶ್, ಶ್ರೀ ಕೆ.ಮಲ್ಲಿಕಾರ್ಜುನಯ್ಯ ಇವರುಗಳನ್ನು ಸನ್ಮಾನಿಸಲಾಯಿತು. ಅಧ್ಯಕ್ಷತೆಯನ್ನು ಮುಖ್ಯ ಪ್ರವರ್ತಕರಾಗಿದ್ದ ಶ್ರೀ ಲಿಂಗಪ್ಪನವರು ವಹಿಸಿದ್ದರು. ಈ ಶುಭ ಸಂದರ್ಭದಲ್ಲಿ ಎಲ್ಲಾ ಪ್ರವರ್ತಕರುಗಳು ಮತ್ತು ಸರ್ವಸದಸ್ಯರು ಹಾಜರಿದ್ದರು.



**ಸ್ವಂತ ಕಟ್ಟಡದ ಉದ್ಘಾಟನೆ :** ಕಾಳಿದಾಸ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿ ಸ್ವಂತ ಕಟ್ಟಡದ ಉದ್ಘಾಟನಾ ಸಮಾರಂಭ. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರಿಗೆ ಸನ್ಮಾನಿಸಲಾಯಿತು.



ಶ್ರೀ ಗುರುಕುಲ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ತುಮಕೂರು ಸಹಕಾರಿಯ ವತಿಯಿಂದ "ಗುರುಕುಲ ಟೆಕ್ಸ್‌ಟೈಲ್" ಹಾಗೂ ನೂತನ ಶಾಖೆಯ ಉದ್ಘಾಟನೆ.

## ವಿದ್ಯಾರ್ಥಿ ವೇತನ ವಿತರಣೆ

ಬೆಳ್ತಂಗಡಿ: ಬೆಳ್ತಂಗಡಿ ಪ್ರೇರಣಾ ಸೌಹಾರ್ದ ಸಹಕಾರಿ ನಿ., ಬೆಳ್ತಂಗಡಿ ಸಹಕಾರಿಯ ವತಿಯಿಂದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಲ್ಯಾನ್ಸಿ ಎ. ಪಿರೇರಾರವರು ವಹಿಸಿದ್ದರು. ಉದ್ಘಾಟನೆ ಹಾಗೂ ಆಶೀರ್ವಚನೆಯನ್ನು ಬೆಳ್ತಂಗಡಿ ಧರ್ಮಕೇಂದ್ರದ ಧರ್ಮ ಗುರುಗಳಾದ ಅತೀ ವಂದನೀಯ ಸ್ವಾಮಿ ಬೊನವೆಂಚೆರ್ ನಜ್ರೆತ್ರವರು ವಹಿಸಿದ್ದರು. ಮೂರು ಶಾಲೆಗಳ 13 ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.



## ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ

### ಹೇಮಾದ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ತೀರ್ಥಹಳ್ಳಿ



ಶ್ರೀ ಹೆಚ್.ಎಂ.ಮಹಾಬಲ ಭಟ್ಟ
ಅಧ್ಯಕ್ಷರು



ಶ್ರೀ ಕೆ. ಎಸ್. ನಾರಾಯಣ ರಾವ್
ಉಪಾಧ್ಯಕ್ಷರು

### ಜಂಬಲದಿನ್ನಿ ಸೌಹಾರ್ದ ಪತ್ತಿನ ಸಹಕಾರಿ ನಿ., ಸಿರಿವಾರ



ಶ್ರೀ ಬಸವರಾಜ ಟಿ.
ಅಧ್ಯಕ್ಷರು



ಶ್ರೀ ವಿರೇಶ್ ಎಚ್.
ಉಪಾಧ್ಯಕ್ಷರು

### ದಿ. ಜಂಬಗಿ (ಆ) ಶ್ರೀ ಬಸವ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜಂಬಗಿ (ಆ)



ಶ್ರೀ ವಿಜಯಸಿಂಗ ಬ. ರಜಪೂರ
ಅಧ್ಯಕ್ಷರು



ಶ್ರೀ ರಾಮಪ್ಪ ಮಂ. ಗುಡಳ
ಉಪಾಧ್ಯಕ್ಷರು



# "ಅಧಿಕಾರಿ ನೀನಲ್ಲ ವಿಧಿ ಬೆಪ್ಪನಲ್ಲ"

▶▶ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

**"ನಂಬಿಕೆಯಿಂದ ಸದ್ಗತಿ ಪ್ರಾಪ್ತಿ"**

**"ನಂಬದಿರ್ದನು ತಂದೆ ನಂಬಿದನು ಪ್ರಹ್ಲಾದ**
**ನಂಬಿಯುಂ ನಂಬದಿಹ ಇಬ್ಬಂದಿ ನೀನು**
**ಕಂಬದಿನೋ ಬಿಂಬದಿನೋ ಮೋಕ್ಷವವರಿಂಗಾಯ್ತು**
**ಸಿಂಬಳದ ನೊಣ ನೀನು ಮಂಕುತಿಮ್ಮ"**

**– ಡಿ.ವಿ.ಜಿ.**

"ನಂಬಿ ಕರೆದರೆ ಓ ಎನ್ನನೇ ಶಿವನು?" ಎನ್ನುವ ದೃಢ ವಿಶ್ವಾಸದ ಉಕ್ತಿಯನ್ನು ನಂಬಿ ಬದುಕಿದವರು ನಮ್ಮ ಶರಣ ಶರಣೆಯರು, ವಚನಕಾರ್ತಿಯರು, ಋಷಿಮುನಿಗಳು, ಸಂತರು, ಚಿಂತನಶೀಲರು, ಅದರಲ್ಲೂ "ದೇವರಿದ್ದಾನೆ ಮಾತ್ರವಲ್ಲ, ನನಗಾಗಿಯೇ ದೇವರಿದ್ದಾರೆ" ಎಂಬ ತಗ್ಗದ ಕುಗ್ಗದ ಉತ್ಸಾಹದ ಭಕ್ತಿಯನ್ನು ಹೊಂದಿದ್ದ ಬಾಲ್ಯದಲ್ಲಿಯೇ ದೃಢಭಕ್ತಿಯ ಪರಾಕಾಷ್ಠೆಯನ್ನು ಪ್ರದರ್ಶಿಸಿ ತಮ್ಮ ವ್ಯಕ್ತಿತ್ವದ ದಿವ್ಯತೆಯನ್ನು ಮೆರೆದವರಲ್ಲಿ ದೃಢಭಕ್ತಿಯ ಧೃವ, ಪವಿತ್ರ ಪ್ರಹ್ಲಾದ, ನಿಷ್ಠೆಯ ನಚಿಕೇತ, ಮಹಿಮಾನ್ವಿತ ಮಾರ್ಕಾಂಡೇಯ ಇತ್ಯಾದಿ ಬಾಲಭಕ್ತರ ಸರಣಿಯೇ ನಮ್ಮ ಸ್ಮೃತಿಪಟಲದ ಮುಂದೆ ಹಾದು ಹೋಗುತ್ತದೆ.

ಇಂದು ನಾವೆಲ್ಲರೂ ಹಂಚಿಕೊಳ್ಳಬೇಕಾದ ಡಿ.ವಿ.ಜಿ.ಯವರ "ನಂಬಿಕೆ" ಆಧಾರಿತ ಪದ್ಯವು ಪೌರಾಣಿಕಜನಿತ ಉಪಮೆಯನ್ನು ಒಳಗೊಂಡಿರುವುದಾಗಿದೆ. ಪದ್ಯದ ವಿವರಣೆ ಪೂರ್ವ ನಂಬಿಕೆ ಆಧಾರಿತ ಪುಟ್ಟ ಕಥೆಯೊಂದು ನನ್ನ ನೆನಪಿಗೆ ಬರುತ್ತಿದೆ. ಅದನ್ನು ಸವಿದು ನಂತರ ಪದ್ಯದ ತಿರುಳನ್ನು ಅರಿಯೋಣ.

ಪ್ರಸವ ವೇದನೆಯ ಜಿಂಕೆಯೊಂದು ತನ್ನ ಮರಿಗೆ ಜನ್ಮ ನೀಡಿ ಈ ಜಗತ್ತಿಗೆ ಅದರ ಅಸ್ತಿತ್ವವನ್ನು ವಂಶಾವಳಿ ಮೂಲಕ ಮುಂದುವರಿಸಲು ಸುರಕ್ಷಿತ ಸ್ಥಳವೊಂದರ ಶೋಧನೆಯಲ್ಲಿ ತೊಡಗಿ ಕೊನೆಯಲ್ಲಿ ದಟ್ಟಾರಣ್ಯದಲ್ಲಿ ರಹಸ್ಯ ತಾಣವೊಂದರಲ್ಲಿ ಸ್ಥಿತವಾಗಿ ಇನ್ನೇನು ಮರಿಗೆ ಜನ್ಮ ನೀಡಬೇಕೆಂಬ ಗಳಿಗೆಯಲ್ಲಿ ನಾಲ್ಕೂ ದಿಕ್ಕುಗಳಿಂದ ಒದಗಿ ಬಂದಿರುವ ಅವಘಡದ ಭಯಾನಕ ದೃಶ್ಯವಾಗಿ ಒಂದು ದಿಕ್ಕಿನಲ್ಲಿ ಬಂದೂಕುಧಾರಿಯಾದ ಬೇಟೆಗಾರ ಗುಂಡು ಹಾರಿಸಲು ಸಿದ್ಧನಾಗಿದ್ದರೆ, ಇನ್ನೊಂದು ದಿಕ್ಕಿನಲ್ಲಿ ಹಸಿದ ಹೆಬ್ಬುಲಿ ಘರ್ಜಿಸುತ್ತಿದ್ದರೆ, ಮತ್ತೊಂದು ದಿಕ್ಕಿನಲ್ಲಿ ಪ್ರಜ್ವಲಿಸುವ ಕೆನ್ನಾಲಿಗೆಯ ಬೆಂಕಿ, ಮಗದೊಂದು ದಿಕ್ಕಿನಲ್ಲಿ ಗುಡುಗು ಸಿಡಿಲಿನ ಆರ್ಭಟ ಕೇಳಿ ಬಂದು ಜಿಂಕೆಯ ಜಂಘಾಬಲವೇ ಉಡುಗಿ ಹೋಯಿತು, ಆದರೆ ತುಂಬುಗರ್ಭಿಣಿಯಾಗಿದ್ದ ಜಿಂಕೆಗೆ ಅಲ್ಲಿಯೇ ಜನ್ಮ ನೀಡದ ಹೊರತು ಬೇರೆ ದಾರಿಯಿರಲಿಲ್ಲ. ತನ್ನ ದೈನ್ಯ ಸ್ಥಿತಿಯ ಅರಿವನ್ನು ತಿಳಿದುಕೊಂಡ ಜಿಂಕೆಯು ಮನದಾಳದ ಭಕ್ತಿಯಿಂದ ತನ್ನನ್ನು ಹಾಗೂ ಮರಿಯನ್ನು ರಕ್ಷಿಸಿಕೊಡೆಂದು ಸರ್ವಾಂತರ್ಯಾಮಿ, ಸರ್ವಶಕ್ತ ಭಗವಂತನಲ್ಲಿ ಮೊರೆಯಿಟ್ಟಿತು.

ಮನದ ಕರೆಯು ಅಸದೃಶ್ಯವಾಗಿದ್ದರೂ ಅದರ ಶಕ್ತಿ ಅದ್ಭುತವಾಗಿತ್ತು, ಅಂತೆಯೇ ಜಿಂಕೆಯ ಪ್ರಾರ್ಥನೆಯು "ನಿಸ್ತಂತು ಮಾಧ್ಯಮ"ದ (Wireless Media) ಮೂಲಕ ಕ್ಷಣಾರ್ಧದಲ್ಲಿ ಸರ್ವಶಕ್ತಿಯ ಮೂಲವಾದ ದೇವನನ್ನು ತಲುಪಿ ಜಿಂಕೆಯ ಮನದಾಳದ ನಿಸ್ವಾರ್ಥ ಭಕ್ತಿಗೆ ಒಲಿದ ಭಗವಂತನು ತನ್ನ ಅಸದೃಶ್ಯ ಶಕ್ತಿಯಿಂದ ಕಾರ್ಯತತ್ಪರನಾದ ಪರಿಣಾಮವಾಗಿ ಗುಡುಗು ಸಿಡಿಲಿನ ಹೊಡೆತದಿಂದ ಬಂದೂಕುಧಾರಿ ಸಾವನ್ನಪ್ಪಿದ, ಬಂದೂಕುಧಾರಿಯ ಕೈಗೆ ಸ್ಪರ್ಶವಾಗಿ ಬಂದೂಕು ಚಾಲನೆಯಾಗಿ ಗುಂಡು "ಡಂ" ಎಂಬ ಶಬ್ಧದೊಂದಿಗೆ ಹುಲಿಗೆ ಬಡಿಯಿತು, ಈ ಹೊಡೆತದಿಂದ ಹುಲಿಯೂ ಸತ್ತಿತು. ಮಾಯದಂತಹ ಎಡೆಬಿಡದ ಮಳೆಸುರಿದು, ಕೆನ್ನಾಲಿಗೆಯ ಬೆಂಕಿಯೂ ನಂದಿತ್ತು. ಮೇಲಿನ ಪ್ರಕ್ರಿಯೆಗಳ ಮೂಲಕ ಜಿಂಕೆಗೆ ಪ್ರತ್ಯಕ್ಷದರ್ಶಿಗಳಾಗಿದ್ದ ಆಪತ್ತಿನ ಮೂಲಗಳು ಕಣ್ಮುಂದೆಯೇ ಕ್ಷಣಾರ್ಧದಲ್ಲಿ ನಾಶವಾಗುವ ಮೂಲಕ ಸಂದಿತ್ತು ಭಕ್ತಿಗೆ ಬೆಲೆ.

ಬಾಲಕ ಪ್ರಹ್ಲಾದನಿಗೆ ಪ್ರತಿಶತ ನೂರರಷ್ಟು ಭಗವಂತನಲ್ಲಿ ನಂಬಿಕೆ. ಅಷ್ಟೇ ತದ್ವಿರುದ್ಧ ದಿಕ್ಕಿನ ಚಿಂತನೆ ಹರಿದ್ವೇಷಿಯಾದ ತಂದೆ ಹಿರಣ್ಯಕಶ್ಯಪುವಿನದು. ಪ್ರೀತಿಯಿಂದ ಪ್ರಹ್ಲಾದನು ದೇವರನ್ನು ನೆನೆದರೆ ಹಿರಣ್ಯಕಶ್ಯಪುವೂ ಸಹ ದ್ವೇಷದಿಂದಲೇ ಸದಾ ಹರಿಯ ನೆನಪಿನಲ್ಲಿಯೇ ಕುದಿಯುತ್ತಲಿದ್ದ. ಈ ಉದಾರಣೆಯಲ್ಲಿ ಈರ್ವರೂ ಹರಿಸ್ಮರಣೆಕಾರರೇ, ಸ್ಮರಣೆಯ ದಿಕ್ಕು ಬೇರೆ ಬೇರೆ. ಆದರೆ ತತ್ಫಲವಾಗಿ ಈರ್ವರಿಗೂ ಸರ್ವಶಕ್ತ ಭಗವಂತನ ದರ್ಶನ ಹಾಗೂ ಜೀವನ್ಮುಕ್ತಿ ನೀಡಿಕೆ ಲಾಭ. ಆದರೆ ನಮ್ಮ ಪಾಡೋ ಒಂದು ಸಾರಿ ನಂಬಿಕೆಯಿದೆ ಎಂದವರು ಮುಂದಿನ ಗಳಿಗೆಯಲ್ಲಿ ನಂಬಿಕೆಯಿಲ್ಲದವರಾಗಿರುತ್ತೇವೆ. ದೇವರಿದ್ದಾನೆಯೇ ಎಂದು ಯಾರಾದರೂ ಕೇಳಿದರೆ "ಇದ್ದಾನೇನೋ ಇರಬಹುದೇನೋ" ಎಂದು ಕೆಲವರು ಉತ್ತರಿಸಿದರೆ ಇನ್ನೂ ಕೆಲವರು ಪ್ರಾಯೋಗಿಕ ಪರೀಕ್ಷೆ ನಡೆಸಿ ಪೂರ್ಣ ಫಲಿತಾಂಶ ಪಡೆದವರಂತೆ "ದೇವರಿಲ್ಲವೇ ಇಲ್ಲ" ಎನ್ನುವವರೂ ಇದ್ದಾರೆ. ಇಂತಹ ನಮ್ಮ ಇಬ್ಬಗೆಯ ಸ್ಥಿತಿಯನ್ನು ಕಂಡು ಕವಿ ಮಹಾಶಯರು ಸಿಂಬಳದಲ್ಲಿ ಸಿಕ್ಕುಹಾಕಿಕೊಂಡ ನೊಣದ ಉದಾಹರಣೆ ನೀಡುತ್ತಾ ಅದಕ್ಕೆ ಸಿಂಬಳದ ಸ್ನಿಗ್ಧತೆಯ ಸ್ಪರ್ಶದಿಂದ ಬಿಡುಗಡೆಯೂ ಇಲ್ಲ ಹಾಗೂ ಆ ಸಿಂಬಳವನ್ನು ಅದು ತಿನ್ನುವಂತೆಯೂ ಇಲ್ಲ ಇಂತಹ ಇಬ್ಬಗೆಯ ಮನಃಸ್ಥಿತಿಯವರು ನಾವೆಂದು ವರ್ಣಿಸುತ್ತಾ "ಹರಿಪ್ರಿಯ–ಹರಿದ್ವೇಷಿ"ಗಳಾದ ಈರ್ವರಿಗೂ ಮೋಕ್ಷ ದೊರೆಕಿತಾದ್ದರಿಂದ ನಮ್ಮನ್ನು ಸಹ ಒಂದು ದೈವಪ್ರೇರಿತ ನಿರ್ದಿಷ್ಟ ಚಿಂತನೆಯ ಬಲದಿಂದ ದೈವಾಂಶ ಪ್ರೇರಿತರಾಗಲು ತನ್ಮೂಲಕ ನಮ್ಮ ಜೀವನವನ್ನು ವಿಕಸಿತಕೊಳ್ಳುವಂತೆ ಕರೆ ನೀಡುತ್ತಿದ್ದಾರೆ.

ಈ ಪ್ರಕ್ರಿಯೆಯ ಪರಿಚಿಂತನೆಯಲ್ಲಿಯೇ ತೊಡಗಿದ ಭಕ್ತರು, ಸಾಧುಸಂತರು, ದೈವಾಂಶಸಂಭೂತರು ಕರೆಕೊಟ್ಟಿರುವ ಮಾತಿದು "ನೀನು ನಿಸ್ವಾರ್ಥ ಕಾರ್ಯತತ್ಪರನಾಗು ಆಗ ದೈವವು ನಿನ್ನನ್ನು ತನ್ನದೇ ಸ್ವರೂಪದ ಪಾಲುದಾರೆಂದು ಪರಿಗಣಿಸಿ ನಿನಗಾರು ಎದುರಿಲ್ಲದಂತೆ ಆಶೀರ್ವದಿಸಿ, ನಿನಗೆ ಬೇಕಾದ ಯಶಸ್ಸನ್ನು ಇಳೆಬಾನ್ಗಳಲಿ ಭೋಮ್ಯಾಕಾಶಗಳಲ್ಲಿ ಯಾವ ಶಕ್ತಿಯೂ ತಡೆಹಿಡಿಯದಂತೆ ಆಶೀರ್ವದಿಸುತ್ತದೆ. ಮುಂದುವರೆದು ಒಂದೊಮ್ಮೆ ಅರಿತೋ ಅರಿಯದೆಯೋ ತಪ್ಪೆಸಗಲ್ಪಟ್ಟಿದ್ದರೆ ಕ್ಷಮಿಸಿ ಕಾಪಾಡಿ ಹರಸಿಹಾರೈಸಿ ಮನ್ನಿಸಿ ಮುನ್ನಡೆಸುತ್ತದೆಯೆಂದಿದ್ದಾರೆ. "When you are a partner of GOD, no force on earth and heaven can prevent success from you".

ನಮ್ಮ ಆತ್ಮದ ಇರುವಿನ ಜೊತೆಗೆ ಜ್ಞಾನದ ಅರಿವನ್ನು ಪಡೆದು ಸರ್ವರಿಗೆ ಸುಖಮಯವಾದ ಸಹಕಾರ ಜೀವನವನ್ನು ನಡೆಸೋಣ, ಕೈಲಾದ ಸಹಾಯದ ಹಸ್ತವನ್ನು ಚಾಚೋಣವೆಂಬ ಬದಲಾವಣೆಯನ್ನು ತಂದುಕೊಳ್ಳೋಣ, ಸಹಾಯದ ಹಸ್ತ ನೀಡಲಾಗದಿದ್ದರೂ ಪರವಾಗಿಲ್ಲ ತೊಂದರೆ ಕೊಡದಿರೋಣ ಎಂಬ ಅಂಶವನ್ನು ಮೇಲಿನ ಪದ್ಯದಿಂದ ಅರಗಿಸಿಕೊಳ್ಳೋಣ.

# ನಿಮ್ಮ ಪ್ರಶ್ನೆ



# ನಮ್ಮ ಉತ್ತರ

– ಶ್ರೀ ಗುರುಪ್ರಸಾದ ಬಂಗೇರ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

**ಶ್ರೀ ಪದ್ಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು.**

**ಪ್ರಶ್ನೆ 01 : ಸದಸ್ಯರಿಗೆ ಲಾಭಾಂಶ ವಿತರಿಸಲು ಗರಿಷ್ಠ ಮಿತಿ ಇದೆಯೇ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10(2) (xviii) ರಂತೆ ಪ್ರತಿಯೊಂದು ಸಹಕಾರಿಯು ತನ್ನ ಉಪವಿಧಿಯಲ್ಲಿ ಸಂದಾಯಿತ ಷೇರು ಬಂಡವಾಳದ ಮೇಲೆ ಸದಸ್ಯರಿಗೆ ಸಂದಾಯ ಮಾಡಬಹುದಾದ ಗರಿಷ್ಠ ಲಾಭಾಂಶದ ಕುರಿತಾದ ಪ್ರಾವಧಾನ ಕಲ್ಪಿಸತಕ್ಕದ್ದು. ಸಹಕಾರಿಯು ತನ್ನ ಸದಸ್ಯರಿಗೆ ವಿತರಿಸುವ ಲಾಭಾಂಶದ ಗರಿಷ್ಠ ಮಿತಿಯು ಸಹಕಾರಿಯ ಉಪವಿಧಿಯಲ್ಲಿ ನಿರ್ಧರಿಸುವ ಗರಿಷ್ಠ ಮಿತಿಯ ವ್ಯಾಪ್ತಿಗೆ ಒಳಪಡತಕ್ಕದ್ದು. ಗರಿಷ್ಠ ಮಿತಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 67(3)ರ ಸದಸ್ಯತ್ವದ ಷರತ್ತಾಗಿ ಚಂದಾ ನೀಡಲಾದ ಬಂಡವಾಳದ ಮೇಲೆ ಸಾಮಾನ್ಯವಾಗಿ ಅವು ಸೀಮಿತ ಪರಿಹಾರವನ್ನು ಪಡೆಯುತ್ತವೆ ಎಂಬ ಸಹಕಾರ ತತ್ವದ ಪ್ರಾವಧಾನಕ್ಕೆ ಅನುಗುಣವಾಗಿರಬೇಕು.

**ಪ್ರಶ್ನೆ 02 : ಸಹಕಾರಿಯ ಹಣಕಾಸಿನ ಪರಿಸ್ಥಿತಿಗೆ ಅನುಗುಣವಾಗಿ ಸದಸ್ಯರ ಶೇರಿನ ಮುಖಬೆಲೆ ಬದಲಾವಣೆ ಆಗುತ್ತದೆಯೇ? ಶೇರು ವಾಪಸ್ ಪಡೆಯುವವರಿಗೆ ಅನ್ವಯವಾಗುವಂತೆ ವಿಶದಪಡಿಸಿ.**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 8 ರಂತೆ ನಿಯಮಿತ ಅಥವಾ ಅನಿಯಮಿತ ಹೊಣೆಗಾರಿಕೆಯೊಂದಿಗೆ ಸಹಕಾರಿಯನ್ನು ನೋಂದಣಿ ಮಾಡಲು ಅವಕಾಶವಿರುತ್ತದೆ. ನಿಯಮಿತ ಹೊಣೆಗಾರಿಕೆಯ ಸಹಕಾರಿಯಲ್ಲಿ ಸದಸ್ಯರ ಹೊಣೆಗಾರಿಕೆಯು ತಾವು ಸಹಕಾರಿಯಲ್ಲಿ ಹೊಂದಿರುವ ಶೇರು ಹಣಕ್ಕೆ ಸೀಮಿತವಾಗಿರುತ್ತದೆ. ಸಹಕಾರಿಯ ಹಣಕಾಸಿನ ಪರಿಸ್ಥಿತಿ ಅಂದರೆ ಲಾಭ ಮತ್ತು ನಷ್ಟಗಳಿಗೆ ಅನುಗುಣವಾಗಿ ಸದಸ್ಯರ ಶೇರಿನ ಮುಖಬೆಲೆಯಲ್ಲಿ ಬದಲಾವಣೆ ಆಗುವುದಿಲ್ಲ. ಅನಿಯಮಿತ ಹೊಣೆಗಾರಿಕೆಯ ಸಹಕಾರಿಯಲ್ಲಿ ಸಹಕಾರಿಯ ಹಣಕಾಸಿನ ಪರಿಸ್ಥಿತಿಗೆ ಅನುಗುಣವಾಗಿ ಸದಸ್ಯರ ಶೇರಿನ ಮುಖಬೆಲೆಯಲ್ಲಿ ಬದಲಾವಣೆಯಾಗುತ್ತದೆ.

ಶೇರು ಹಣವನ್ನು ಮರುಪಾವತಿಸುವ ವಿಧಾನವನ್ನು ಸಹಕಾರಿಯು ತನ್ನ ಉಪವಿಧಿಯಲ್ಲಿ ಪ್ರಾವಧಾನ ಕಲ್ಪಿಸತಕ್ಕದ್ದು. ಯಾವುದೇ ಸದಸ್ಯನಿಗೆ ಶೇರು ಹಣ ಮರುಪಾವತಿ ಮಾಡುವುದಿದ್ದಲ್ಲಿ ಅಥವಾ ಸಾಲಕ್ಕೆ ವಜಾ ಮಾಡಿಕೊಳ್ಳುವುದಿದ್ದಲ್ಲಿ ಅಥವಾ ಸಂದರ್ಭಾನುಸಾರ ಮೃತ ವ್ಯಕ್ತಿಯ ವಾರಸುದಾರನಿಗೆ ವರ್ಗಾಯಿಸುವುದಿದ್ದಲ್ಲಿ, ಆ ಸದಸ್ಯನಿಗೆ ನೀಡಬಹುದಾದ ಮೊತ್ತವನ್ನು ಆ ದಿನದಂದು ಸಹಕಾರಿಯ ಶೇರಿನ ಬೆಲೆಯನ್ನು ಆಧರಿಸಿ ನೀಡತಕ್ಕದ್ದು. ಪರಂತು ಶೇರಿನ ಮುಖಬೆಲೆಗಿಂತ ಹೆಚ್ಚಿನ ಮೊತ್ತವನ್ನು ನೀಡತಕ್ಕದ್ದಲ್ಲ. ಶೇರಿನ ಬೆಲೆಯನ್ನು ಈ ಕೆಳಗಿನಂತೆ ಲೆಕ್ಕಹಾಕತಕ್ಕದ್ದು.

ಪ್ರತಿ ಶೇರಿನ ಬೆಲೆ = ಸಹಕಾರಿಯ ಒಟ್ಟು ಪಾವತಿಯಾದ ಪಾಲು ಬಂಡವಾಳ – ಕ್ರೋಢೀಕೃತ ನಷ್ಟ ÷ ಒಟ್ಟು ಶೇರುಗಳ ಸಂಖ್ಯೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

### ಕೇಂದ್ರ ಕಛೇರಿಯಿಂದ ಆಯೋಜಿಸಲು ಉದ್ದೇಶಿಸಲಾಗಿರುವ ತರಬೇತಿಗಳು

- 5 ದಿನಗಳ ಅಲ್ಪಾವಧಿ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ.
- ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ 2 ದಿನಗಳ ಆಡಳಿತ ಅಭಿವೃದ್ಧಿ ತರಬೇತಿಯನ್ನು ಸೆಪ್ಟೆಂಬರ್ ಆಯೋಜಿಸಲು ಉದ್ದೇಶಿಸಲಾಗಿದೆ.
- ಸಂಯುಕ್ತ ಸಹಕಾರಿ ಸಿಬ್ಬಂದಿಯವರಿಗಾಗಿ 2 ದಿನಗಳ ತರಬೇತಿಯನ್ನು ಅಕ್ಟೋಬರ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.
- ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್‌ಗಳ ಸಿಬ್ಬಂದಿಗಳಿಗಾಗಿ 2 ದಿನಗಳ Subject Oriented ತರಬೇತಿಯನ್ನು ಅಕ್ಟೋಬರ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.
- ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್‌ಗಳ ಪದಾಧಿಕಾರಿಗಳು ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಅಭಿವೃದ್ಧಿ ತರಬೇತಿಯನ್ನು ನವೆಂಬರ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

### ವಿಭಾಗೀಯ ಕಛೇರಿಗಳಿಂದ ಆಯೋಜಿಸಲು ಉದ್ದೇಶಿಸಲಾಗಿರುವ ತರಬೇತಿಗಳು

- ಜಿಎಸ್‌ಟಿ ಕುರಿತು ತರಬೇತಿಯನ್ನು ಆಗಸ್ಟ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಲಾಗಿದೆ.
- ಸಹಕಾರ ಮತ್ತು ಯುವಜನತೆ – ಸಂವಾದ / ವಿಚಾರ ಸಂಕಿರಣವನ್ನು ಸೆಪ್ಟೆಂಬರ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಲಾಗಿದೆ.
- ಮಾಧ್ಯಮ/ಪತ್ರಕರ್ತರಿಗೆ – ಸಹಕಾರ ಮತ್ತು ಪತ್ರಿಕೋದ್ಯಮ ವಿಚಾರ ಸಂಕಿರಣ / ಸಂಪರ್ಕ ಸಭೆಯನ್ನು ಅಕ್ಟೋಬರ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಲಾಗಿದೆ.

* ತರಬೇತಿಯ ದಿನಾಂಕ, ಸ್ಥಳಗಳ ವಿವರಗಳನ್ನು ಮುಂಬರುವ ದಿನಗಳಲ್ಲಿ ತಿಳಿಸಲಾಗುವುದು.

# ಸಹಕಾರಿ ಬ್ಯಾಂಕರನ ಮಹತ್ವದ ಪಾತ್ರ

ಮನೋಹರ ಮಸ್ಕಿ, ಸಂಸ್ಥಾಪಕ ಅಧ್ಯಕ್ಷರು, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್.

ಬ್ಯಾಂಕಿಂಗ್ ಪ್ರಾರಂಭದಲ್ಲಿ ಎಲ್.ಪಿ.ಜಿ. ಬರುವವರೆಗೆ ಬ್ಯಾಂಕಿಂಗ್‌ನ್ನು ಸಾಲ ನೀಡುವುದಕ್ಕಾಗಿ ಠೇವಣಿಗಳನ್ನು ಸ್ವೀಕರಿಸುವುದು (Accepting deposits for the purpose of lending) ಎಂದು ವ್ಯಾಖ್ಯಾನಿಸಲಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಎಲ್.ಪಿ.ಜಿ.ಯ ಪ್ರಭಾವದಿಂದ ಆಧುನಿಕ ತಂತ್ರಜ್ಞಾನಗಳ ಬೆಳವಣಿಗೆಗಳಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲೂ ನಿರಂತರ ಬದಲಾವಣೆಗಳು ಆಗುತ್ತಿರುವುದರಿಂದ ಬ್ಯಾಂಕರನ ಪಾತ್ರ ಬಹಳ ವಿಶಾಲವಾಗಿ ಬೆಳೆದಿದೆ. ಸಹಕಾರಿ ಬ್ಯಾಂಕುಗಳು ಸಹ ಇದಕ್ಕೆ ಹೊರತಾಗಿಲ್ಲ. ಹಾಗಾಗಿ ಸಹಕಾರಿ ಬ್ಯಾಂಕರನ ಪಾತ್ರ ಹೆಚ್ಚಿನ ಮಹತ್ವವನ್ನು ಪಡೆದಿದೆ.

ಒಬ್ಬ ವೈದ್ಯ ರೋಗಿಗೆ ವೈದ್ಯಕೀಯ ಸೇವೆಯನ್ನು ಮಾತ್ರ ಕೊಡಲು ಸಾಧ್ಯ. ಅದೇ ರೀತಿ ಒಬ್ಬ ಇಂಜಿನಿಯರ್ ಒಂದು ಮನೆಯನ್ನು ಕಟ್ಟಿಕೊಡಲು ಸಾಧ್ಯ ಅಥವಾ ಒಂದು ಯಂತ್ರ ಅಥವಾ ಒಂದು ತಾಂತ್ರಿಕ ವ್ಯವಸ್ಥೆ ನಿರ್ವಹಣೆ ಮಾಡಲು ಸಾಧ್ಯ, ಅದೇ ರೀತಿ ವಿಷಯಗಳ ಪರಿಣಿತಿ ಹೊಂದಿದವರು ಅವರವರ ವಿಷಯಗಳಿಗೆ ಸೀಮಿತವಾಗಿ ಸೇವೆಯನ್ನು ಕೊಡಬಲ್ಲರೇ ಹೊರತು ಒಬ್ಬ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಬ್ಯಾಂಕರ್ ಮಾತ್ರ ಮಹತ್ವದ ಪಾತ್ರವನ್ನು ನಿರ್ವಹಿಸಲು ಸಾಧ್ಯ. ಒಬ್ಬ ವ್ಯಕ್ತಿ ಬ್ಯಾಂಕಿಂಗ್ ಸೇವೆಯನ್ನು ಒಪ್ಪಿಕೊಂಡಾಗ ಅವನ ಸೇವೆಯ ಬಹುಮುಖ ವ್ಯಕ್ತಿತ್ವದ ಅರಿವಾಗುತ್ತದೆ. ಹಣಕಾಸಿನ ನಿರ್ವಹಣೆಯ ಬಗ್ಗೆ ಗ್ರಾಹಕರ ಜೊತೆಗೆ ತನ್ನ ಬ್ಯಾಂಕಿನ ಮತ್ತು ರಿಸರ್ವ್ ಬ್ಯಾಂಕಿನ ಮಾರ್ಗದರ್ಶನಗಳನ್ನು ಗಮನದಲ್ಲಿರಿಸಿಕೊಂಡು ಉಳಿದ ಹಣಕಾಸು ನಿರ್ವಹಣಾ ಸಂಸ್ಥೆಗಳ ಜೊತೆಗೆ ಉತ್ತಮ ಬಾಂಧವ್ಯವನ್ನು ಕಾಯ್ದುಕೊಂಡು ಕಾರ್ಯನಿರ್ವಹಿಸುವುದು ಅತ್ಯಂತ ಮಹತ್ವದ್ದೆನಿಸುತ್ತದೆ. ಬ್ಯಾಂಕರನು ಯಾವಾಗಲೂ In good faith and without negligence ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುವುದು ಅವಶ್ಯಕ.

**ಹಣದ ಸುರಕ್ಷತೆ :** ಒಬ್ಬ ಬ್ಯಾಂಕರನಾಗಿ ಬ್ಯಾಂಕಿನಲ್ಲಿ ಗ್ರಾಹಕರು ಹಾಗೂ ಸದಸ್ಯರ ವಿವಿಧ ರೀತಿಯ ಠೇವಣಿಗಳ ಸುರಕ್ಷತೆಯ ಜವಾಬ್ದಾರಿಯಿದೆ ಎಂಬುವುದನ್ನು ತಿಳಿಯುವುದು ಅವಶ್ಯಕ.

**ಸಾಲ ನೀಡುವುದು :** ಆರ್ಥಿಕ ಅಭಿವೃದ್ಧಿಗಾಗಿ ಹಣಕಾಸಿನ ನೆರವು ನೀಡುವುದು ಬ್ಯಾಂಕರನ ಕರ್ತವ್ಯ. ಅದಕ್ಕಾಗಿ ಬ್ಯಾಂಕರನು ಗ್ರಾಹಕರ ಠೇವಣಿಗಳನ್ನು ಸುರಕ್ಷಿತವಾಗಿಡುವುದರ ಜೊತೆಗೆ ಸಾಲ ನೀಡುವ ಕೆಲಸವನ್ನು ನಿರ್ವಹಿಸುವುದು ಅಗತ್ಯ. ಸಾಲ ನೀಡುವಾಗ ಗುಣಾತ್ಮಕ ಸಾಲ ನೀಡುವ ಬಗ್ಗೆ ಎಚ್ಚರಿಕೆಯಿಂದ ಕೆಲಸ ನಿರ್ವಹಿಸಬೇಕಾಗುತ್ತದೆ.

**ಹಣ ವರ್ಗಾವಣೆ :** ಗ್ರಾಹಕ ಸೇವೆಯ ಭಾಗವಾಗಿ ಬ್ಯಾಂಕರನು ಹಣದ ವರ್ಗಾವಣೆ ಮಾಡುವ ಕೆಲಸವನ್ನು ಮಾಡಬೇಕಾಗುತ್ತದೆ. ಹಣದ ವರ್ಗಾವಣೆ ಮಾಡುವಾಗ ಒಬ್ಬರ ಖಾತೆಯಿಂದ ಇನ್ನೊಬ್ಬರಿಗೆ ಅಥವಾ ಯಾವುದಾದರೊಂದು ಸೇವೆಗಾಗಿ ಹಣ ಪಾವತಿಸುವುದು ಮಹತ್ವದ ಕಾರ್ಯವಾಗಿದೆ.

**ಹಣದ ಉತ್ಪಾದನೆ :** ಬ್ಯಾಂಕರನ ಅತ್ಯಂತ ಮಹತ್ವದ ಕಾರ್ಯವೆಂದರೆ ಹಣದಿಂದ ಹಣ ಉತ್ಪಾದನೆ. ಗ್ರಾಹಕರಿಂದ ಠೇವಣಿ ಪಡೆದು ಸಾಲವಾಗಿ ನೀಡುವುದು, ಇವೆರಡರ ಅಂತರ ಲಾಭ ಅಂದರೆ ಹಣ ಉತ್ಪಾದನೆ. ಹೂಡಿಕೆಗಳ ಮೇಲೆ ಬರುವ ಬಡ್ಡಿ ಹಣದಿಂದ ಹಣ ಉತ್ಪಾದನೆ.



**ಬ್ಯಾಂಕರನ ಗುಣಲಕ್ಷಣಗಳು :**

- ಶಿಸ್ತು, ದಕ್ಷತೆ, ನಿಷ್ಠೆ, ಪ್ರಾಮಾಣಿಕತೆ, ನಂಬಿಗಸ್ಥರಾಗಿರುವುದು.
- ವಿಶ್ವಾಸಾರ್ಹತೆಯನ್ನು ಬೆಳೆಸಿಕೊಳ್ಳುವುದು.
- ಸಮಗ್ರ ಮಾಹಿತಿ ಕೇಂದ್ರದಂತೆ ಕಾರ್ಯನಿರ್ವಹಿಸುವುದು.
- ಪ್ರಚಲಿತ ವಿಷಯಗಳ ಜ್ಞಾನ ಹೊಂದಿರುವುದು.

**ಬ್ಯಾಂಕರನ ಕಾರ್ಯಚಟುವಟಿಕೆಗಳು :** ಗ್ರಾಹಕರ ಹಿತ ಚಿಂತನೆ, ಗ್ರಾಹಕರ ಹಣದ ಭದ್ರತೆ, ಗ್ರಾಹಕರ ಹಾಗೂ ಸಂಸ್ಥೆಯ ಹಣ ಹೂಡುವಿಕೆಗೆ ಮಾರ್ಗದರ್ಶಿ, ಉದ್ಯಮಿಗಳಿಗೆ ಸಾಲದ ರೂಪದಲ್ಲಿ ಹಣಕಾಸಿನ ನೆರವು, ವ್ಯಾಪಾರಸ್ಥರಿಗೆ ಸಾಲದ ರೂಪದಲ್ಲಿ ಹಣಕಾಸಿನ ನೆರವು, ಸರಕಾರಕ್ಕೆ ಮಾಹಿತಿ ನೀಡುವುದು, ಅನಕ್ಷರಸ್ಥರಿಗೆ ಹಣಕಾಸಿನ ನಿರ್ವಹಣೆಯ ಮಾರ್ಗದರ್ಶಿಯಂತೆ ಕಾರ್ಯನಿರ್ವಹಿಸುವುದು.

**ಬ್ಯಾಂಕರನ ಪ್ರಾಥಮಿಕ ಸೇವೆಗಳು :**

- ಗ್ರಾಹಕರ ಸೇವೆ, ಉಳಿತಾಯ ಖಾತೆ, ಚಾಲ್ತಿ ಖಾತೆ, ನಿರಖು ಠೇವಣಿ ಖಾತೆ, ಬಂಗಾರದ ಸಾಲ, ಪಿಗ್ಮಿ ಸಾಲ ಹೀಗೆ ವಿವಿಧ ಖಾತೆಗಳನ್ನು ತೆರೆಯುವುದು, ಹಣ ತೆಗೆದುಕೊಳ್ಳುವುದು, ಹಣ ಪಾವತಿಸುವುದು, ಹಣ ವರ್ಗಾವಣೆ ಮಾಡುವುದು (ಎನ್‌ಇಎಫ್‌ಟಿ, ಐಎಮ್‌ಪಿಎಸ್, ಆರ್‌ಟಿಜಿಎಸ್) ಸ್ವಾಪ್ ಪೇಮೆಂಟ್ ನೀಡುವುದು, ಚೆಕ್ ಬುಕ್ ನೀಡುವುದು ಕಛೇರಿಯ ಕಡತಗಳ ನಿರ್ವಹಣೆ ಇತ್ಯಾದಿ.
- ಹಣಕಾಸು ನಿರ್ವಹಣೆ, ದಿನ ನಿತ್ಯದ ಕಛೇರಿ ಕಾರ್ಯ ನಿರ್ವಹಣೆ, ನಿರಂತರ ಬ್ಯಾಲೆನ್ಸ್ ಮಾಡುವುದು, ಚೆಕ್ ಕ್ಲಿಯರನ್ಸ್ ನಿರ್ವಹಣೆ, ಓಬಿಸಿ, ಎಲ್‌ಬಿಸಿ.
- ಗ್ರಾಹಕರ ಸಾಲ ಬೇಡಿಕೆಗಳ ಹಾಗೂ ಇತರೆ ಸೌಲಭ್ಯಗಳ ನಿರ್ವಹಣೆ.
- ರಿಸರ್ವ್ ಬ್ಯಾಂಕಿನ ಮಾರ್ಗದರ್ಶಿ ಸೂಚನೆಗಳ ಹಾಗೂ ಬ್ಯಾಂಕಿನ ನೀತಿನಿಯಮಗಳ ಪಾಲನೆ.
- ಪ್ರತಿ ನಿತ್ಯದ, ಸಾಪ್ತಾಹಿಕ, ಪಾಕ್ಷಿಕ, ಮಾಸಿಕ ಹಾಗೂ ವಾರ್ಷಿಕ ವರದಿಗಳ ನಿರ್ವಹಣೆ.
- ಸದಸ್ಯರ ವ್ಯವಹಾರ ಅಭಿವೃದ್ಧಿಗಳಿಗಾಗಿ ಆರ್ಥಿಕ ನೆರವಿನ ಹಾಗೂ ಮಾರ್ಗದರ್ಶನಗಳ ಸೇವೆ.
- ಬ್ಯಾಂಕಿನಿಂದ ನೀಡಬಹುದಾದ ಇತರೆ ಸೌಲಭ್ಯಗಳ ಹಾಗೂ ಚಟುವಟಿಕೆಗಳ

ಚಿಂತನೆ ಹಾಗೂ ಕ್ರಿಯಾ ಯೋಜನೆ ರೂಪಿಸುವುದು ಮತ್ತು ಅನುಷ್ಠಾನಕ್ಕೆ ಕ್ರಮವಿಡುವುದು.

**ಬ್ಯಾಂಕರನು ಹೊಂದಿರಬೇಕಾದ ಕೌಶಲ್ಯತೆಗಳು :**

- ಉತ್ತಮ ಸಾರ್ವಜನಿಕ ಸಂಬಂಧ, ಬ್ಯಾಂಕಿನ ಹಾಗೂ ಬ್ಯಾಂಕಿಂಗ್ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ/ ಗ್ರಾಹಕರಿಗೆ/ ಸದಸ್ಯರಿಗೆ ತಿಳಿಯುವಂತೆ ಮಂಡಿಸುವ ಪ್ರಬುದ್ಧತೆ, ವೃತ್ತಿಪರತೆಯಲ್ಲಿ ಪ್ರಾವೀಣ್ಯತೆ ಹೊಂದಿರುವುದು.
- ಉತ್ತಮ ಬರವಣಿಗೆ, ಉತ್ತಮ ರೀತಿಯಲ್ಲಿ ಓದುವುದು ಮತ್ತು ಸ್ಪಷ್ಟ ಸಂವಹನ ಸಾಮರ್ಥ್ಯ ಅಗತ್ಯ.
- ಬ್ಯಾಂಕಿಂಗ್ ಶಾಸನಗಳ, ನೀತಿ ನಿಯಮಗಳ ಆಳವಾದ ಜ್ಞಾನ. ಕನಿಷ್ಠ ಉಸ್ತುವಾರಿಯಲ್ಲಿ ಹೆಚ್ಚಿನ ಕಾರ್ಯನಿರ್ವಹಿಸುವ ಕೌಶಲ್ಯತೆ.
- ಬ್ಯಾಂಕಿನ ವಿಷಯಗಳ ಕಾರ್ಯನಿರ್ವಹಣೆಯಲ್ಲಿ ಶೀಘ್ರ ತೀರ್ಮಾನಿಸುವ ಸಾಮರ್ಥ್ಯ, ಉನ್ನತ ಮಟ್ಟದಲ್ಲಿ ಸಮಸ್ಯೆಗಳ ನಿರ್ವಹಣೆಯ ಕೌಶಲ್ಯ.
- ಸಕಾರಾತ್ಮಕ ವ್ಯಕ್ತಿತ್ವ, ತಂಡವಾಗಿ ಕಾರ್ಯನಿರ್ವಹಿಸುವ ನೈಪುಣ್ಯತೆ, ಪ್ರಾಸಂಗಿಕ ವಿಷಯಗಳ ನಿರ್ವಹಣೆಯಲ್ಲಿ ಚಾಕಚಕ್ಯತೆ, ವಾದ ವಿವಾದಗಳ ಬಗೆಹರಿಸುವಿಕೆಯಲ್ಲಿ ಶೀಘ್ರದಲ್ಲಿ ಸ್ಪಂದಿಸುವಿಕೆ ಹಾಗೂ ಉತ್ತಮ ಸಂವಾದಕಾರರಾಗಿರುವುದು.
- ಉತ್ತಮ ಮಾರಾಟಗಾರನಾಗಿ ಕಾರ್ಯನಿರ್ವಹಿಸುವ ಗುಣಲಕ್ಷಣಗಳನ್ನು ಹೊಂದಿರುವುದು.
- ಹೊಂದಾಣಿಕೆಯ ಮನೋಭಾವ ಹಾಗೂ ನಿರಂತರ ಹೊಸತನ ಚಿಂತನೆ ಇರುವುದು.

**ಬ್ಯಾಂಕಿಂಗ್ ಕ್ಷೇತ್ರದ ಸವಾಲುಗಳು :** ಠೇವಣಿ ಸಂಗ್ರಹ, ಸಾಲ ನೀಡುವಿಕೆ (Credit Risk), ನಿಧಿಗಳ ಹೂಡುವಿಕೆ (Investment Risk), ಪ್ರಚಲಿತ ಮಾರುಕಟ್ಟೆಯ ವಿಷಯಗಳು (Market Risk), ಬಡ್ಡಿ ಸಂಗ್ರಹ ಹಾಗೂ ಬಡ್ಡಿ ನೀಡುವುದು (Interest Risk) ಲಿಕ್ವಿಡಿಟಿ ರಿಸ್ಕ್ (Liquidity Risk), ಹಣ ವರ್ಗಾವಣೆ/ ಹಣ ಬದಲಾಯಿಸುವುದು/ ಎಕ್ಸ್‌ಚೇಂಜರಿಸ್ಕ್ (Exchange Risk), ಆಪರೇಶನಲ್ ರಿಸ್ಕ್ (Operational Risk), ಆಧುನಿಕ ತಂತ್ರಜ್ಞಾನ (Technology risk), ಅಳವಡಿಸುವಿಕೆ ಮತ್ತು ಕಾನೂನು ವ್ಯವಹಾರಗಳು (Legal risk) ಈ ಎಲ್ಲಾ ಸವಾಲುಗಳನ್ನು ಅವಕಾಶಗಳೆಂದು ಪರಿಗಣಿಸಿ ಕಾರ್ಯ ನಿರ್ವಹಿಸುವುದು ಉತ್ತಮ ಬ್ಯಾಂಕರನ ಅತಿ ಮಹತ್ವದ ಲಕ್ಷಣ ಹಾಗೂ ಜಾಣತನ.

**ಬ್ಯಾಂಕರನು ಗಮನಿಸಲೇಬೇಕಾದ ಅತಿ ಮುಖ್ಯ ಮೂರು ವಿಷಯಗಳು :** ನಾವು ಏನು ಮಾಡುತ್ತೇವೆ? ಯಾಕೆ ಮಾಡುತ್ತೇವೆ? ಮತ್ತು ಹೇಗೆ ಮಾಡುತ್ತೇವೆ? ಎಂಬುದರ ಬಗ್ಗೆ ಗಮನವಿರಲಿ. ಒಳ್ಳೆಯ ಬ್ಯಾಂಕರನೆಂಬುದು ನಿರ್ಧಾರವಾಗುವುದು ಈ ಮೂರು ವಿಷಯಗಳಿಂದ. ಆದ್ದರಿಂದ ಇವುಗಳತ್ತ ಗಮನಹರಿಸಿ ಕಾರ್ಯನಿರ್ವಹಿಸುವುದು ಅವಶ್ಯಕ.

**ಗ್ರಾಹಕ ಸೇವಾ ನಿರ್ವಹಣೆಯ ಮೂಲಗಳು :** ಮಾರುಕಟ್ಟೆಯ ಹಾಗೂ ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳನ್ನು ಗಮನಿಸಿ, ಗ್ರಾಹಕರ ಮನೋಭಾವಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ವ್ಯವಾಟಿನಲ್ಲಿ ವೈವಿಧ್ಯತೆಯನ್ನು ಅಳವಡಿಸಿ, ವ್ಯಾಪಾರದ ಗಾತ್ರವನ್ನು ಹೆಚ್ಚಿಸಿ, ಮೌಲ್ಯವನ್ನು ಹೆಚ್ಚಿಸಿ, ವ್ಯವಾಟುಗಳ ಮೌಲ್ಯಮಾಪನ ನಿರಂತರವಾಗಿರಲಿ.

## ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ನಿರ್ವಹಣೆ ಸೌಹಾರ್ದ ಸಹಕಾರಿಗಳ ಜವಾಬ್ದಾರಿ ಕುರಿತ ಲೇಖನಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸ್ಪಷ್ಟೀಕರಣ




ಹಿಂದಿನ ಸಂಚಿಕೆಯಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ನಿರ್ವಹಣೆ ಸೌಹಾರ್ದ ಸಹಕಾರಿಗಳ ಜವಾಬ್ದಾರಿ ಕುರಿತು ಪ್ರಕಟವಾದ ಲೇಖನದಲ್ಲಿ ಸೌಹಾರ್ದ ಸಹಕಾರಿಗಳಿಗೆ ಜಿಎಸ್‌ಟಿ ಅನ್ವಯವಾಗುವ ಕುರಿತು ತಿಳಿಸಲಾಗಿತ್ತು. ಸದರಿ ಲೇಖನದಲ್ಲಿ ಇರುವ ಗೊಂದಲಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಸ್ಪಷ್ಟೀಕರಿಸಲಾಗುತ್ತದೆ.

ಸಹಕಾರಿಗಳು ಬಡ್ಡಿ ರೂಪದ ಆದಾಯ ಸೇರಿದಂತೆ ಯಾವುದೇ ರೂಪದ ಆದಾಯವು ರೂ.19,00,000/–ಗಳನ್ನು ಮೀರಿದಲ್ಲಿ ಸಹಕಾರಿಯು ಜಿಎಸ್‌ಟಿ ಕಾಯ್ದೆಯಡಿ ನೋಂದಣಿ ಹೊಂದಬೇಕಾಗುತ್ತದೆ ಹಾಗೂ ರೂ.20,00,000/–ಗಳಾದಾಗ ಸೇವಾ ತೆರಿಗೆ ಶೇ.18 ಪಾವತಿಸಬೇಕಾಗುತ್ತದೆ. ಆದರೆ, ಸಹಕಾರಿಯು ಸದಸ್ಯರೊಂದಿಗೆ ಗಳಿಸಿರುವ ಆದಾಯ (ಬಡ್ಡಿ)ಗೆ ಸೇವಾ ತೆರಿಗೆ ಪಾವತಿಸಬೇಕಿರುವುದಿಲ್ಲ. ಆದರೆ, ಉಳಿದ ಸೇವಾ ಶುಲ್ಕಕ್ಕೆ ಸೇವಾ ತೆರಿಗೆ ಪಾವತಿಸಬೇಕಾಗುತ್ತದೆ.

ಉದಾ : ಸಹಕಾರಿಯು ಬಡ್ಡಿಯಿಂದ ರೂ. 18,00,000/– ಆದಾಯವನ್ನು ಗಳಿಸಿದ್ದು, ಸೇವಾ ಶುಲ್ಕ ರೂ. 2,00,000/–ವನ್ನು ಸಂಗ್ರಹಿಸಿದ್ದಲ್ಲಿ ಸಹ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ, 2017ರಡಿ ನೋಂದಣಿ ಹೊಂದಬೇಕಾಗುತ್ತದೆ. ಸಹಕಾರಿಯು ಸದಸ್ಯರೊಂದಿಗೆ ಗಳಿಸಿರುವ ಆದಾಯ (ಬಡ್ಡಿ) ರೂ.18,00,000/–ಕ್ಕೆ ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 80ಪಿ (2)(ಎ)(i)ರಡಿ ಆದಾಯ ತೆರಿಗೆ ಪಾವತಿಸುವ ಅವಶ್ಯಕತೆ ಇರುವುದಿಲ್ಲ (ಆದರೆ, ಐಟಿ ರಿಟರ್ನ್ಸ್ ಮಾಡುವುದು ಕಡ್ಡಾಯ). ಆದರೆ, ಸೇವಾ ಶುಲ್ಕ ರೂ.2,00,000/–ಕ್ಕೆ ಸೇವಾ ತೆರಿಗೆ ಪಾವತಿಸಬೇಕಾಗಿರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಸದಸ್ಯರೊಂದಿಗೆ ಗಳಿಸಿರುವ ಆದಾಯ (ಬಡ್ಡಿ) ಹೊರತುಪಡಿಸಿ ಸೇವಾ ತೆರಿಗೆಗೆ ಒಳಪಡುವ ಮೊತ್ತ ಎಷ್ಟೇ ಇರಲಿ, ಸದರಿ ಮೊತ್ತಕ್ಕೆ ಸೇವಾ ತೆರಿಗೆ ಪಾವತಿಸಬೇಕಾಗುತ್ತದೆ (ಸೇವಾ ಶುಲ್ಕ ಮೊತ್ತ ರೂ.20,00,000/–ಗಳಾಗುವ ಅವಶ್ಯಕತೆಯಿರುವುದಿಲ್ಲ).

**– ಶ್ರೀಕಾಂತ ಬರುವೆ, ಸಹಪ್ರಧಾನ ವ್ಯವಸ್ಥಾಪಕರು, ಕರಾಸೌಸಂಸನಿ.,**

# ‘ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ’ಯ ಪರಿಚಯ ಹಾಗೂ ಅನುಷ್ಠಾನದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

▶▶ **ರಘುನಂದನ ಕೆ.,** ಸಹಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ., ಬೆಂಗಳೂರು

2016ರ ಅಂತರರಾಷ್ಟ್ರೀಯ ಹೆಲ್ತ್ ಇಂಡೆಕ್ಸ್‌ನಂತೆ 188 ದೇಶಗಳಲ್ಲಿ ನಮ್ಮ ದೇಶ 143ನೇ ಸ್ಥಾನದಲ್ಲಿದೆ. ಪಾಕಿಸ್ತಾನ, ಬಾಂಗ್ಲಾದೇಶ, ಸಿರಿಯಾ, ಇರಾಕ್, ಲಿಬಿಯಾ ಇವುಗಳು ರ್‍ಯಾಂಕಿಂಗ್‌ನಲ್ಲಿ ಭಾರತದ ಸಮೀಪವಿದೆ. ಅಂದರೆ ಇತ್ತೀಚಿನ ದಿನಗಳಲ್ಲಿ ಜನ ಸಾಮಾನ್ಯರು ಆರೋಗ್ಯ ಕಾರಣಗಳಿಗಾಗಿ ಹಾಗೂ ಹೆಚ್ಚುತ್ತಿರುವ ವೈದ್ಯಕೀಯ ವೆಚ್ಚಗಳಿಂದಾಗಿ ಸ್ವಸ್ಥ ಜೀವನ ನಡೆಸಲು ಕಷ್ಟಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಹಲವು ಆರೋಗ್ಯ ಯೋಜನೆಗಳನ್ನು ನಮ್ಮ ದೇಶದಲ್ಲಿ ರೂಪಿಸಿ ಜಾರಿಗೆ ತರಲು ಶ್ರಮಿಸಲಾಗುತ್ತಿದೆ. ರಾಜ್ಯ ಸರ್ಕಾರಗಳು ಕೂಡ ತಮ್ಮದೇ ಆದ ಆರೋಗ್ಯ ಯೋಜನೆಗಳನ್ನು ಜಾರಿಗೆ ತರುತ್ತಿವೆ. ಇಂತಹ ಆರೋಗ್ಯ ಯೋಜನೆಗಳ ಆರಂಭಕ್ಕೆ ನಾಂದಿ ಹಾಡಿದ್ದು ಕರ್ನಾಟಕ ರಾಜ್ಯ. ಗ್ರಾಮೀಣ ಭಾಗದಲ್ಲಿನ ರೈತರಲ್ಲಿ ಆರೋಗ್ಯ ರಕ್ಷಣೆಯ ಭರವಸೆಯನ್ನು ಮೂಡಿಸುವ ನಿಟ್ಟಿನಲ್ಲಿ, ರೈತರ ವೈದ್ಯಕೀಯ ವೆಚ್ಚವನ್ನು ತಾನು ಹಂಚಿಕೊಳ್ಳುವ ಮೂಲಕ ರೈತ ಕುಟುಂಬಗಳಿಗೆ ಆಸರೆಯಾಗುವ ಉದ್ದೇಶದಿಂದ 2002ರಲ್ಲಿ ಕರ್ನಾಟಕ ಸರ್ಕಾರ ದೇಶದ ಮೊಟ್ಟಮೊದಲ ಗ್ರಾಮೀಣ ಸಹಕಾರಿಗಳ ಆರೋಗ್ಯ ಯೋಜನೆಯಾದ “ಯಶಸ್ವಿನಿ ರೈತ ಆರೋಗ್ಯ ರಕ್ಷಣಾ ಯೋಜನೆ”ಯನ್ನು ಸಹಕಾರ ಇಲಾಖೆಯ ಮೂಲಕ ಜಾರಿಗೆ ತಂದಿದೆ.

**ಯೋಜನೆಯ ಹಿನ್ನೆಲೆ :** ನಿರಂತರವಾಗಿ ಏರುತ್ತಿರುವ ವೈದ್ಯಕೀಯ ಸೌಲಭ್ಯಗಳಿಂದಾಗಿ ಗ್ರಾಮೀಣ ಭಾಗದ ರೈತ ಕುಟುಂಬಗಳು ತಮ್ಮ ಆರೋಗ್ಯ ರಕ್ಷಣೆಗಾಗಿ ಅಧಿಕ ಮೊತ್ತದ ಹಣವನ್ನು ವ್ಯಯಿಸುತ್ತಿರುವುದನ್ನು ಗಮನಿಸಿದ ಕರ್ನಾಟಕ ರಾಜ್ಯ ಸರ್ಕಾರ, ರೈತರ ಆರೋಗ್ಯ ರಕ್ಷಣೆಯ ಜವಾಬ್ದಾರಿಯಲ್ಲಿ ಸರ್ಕಾರ ಭಾಗವಹಿಸುವ ಯೋಜನೆಯೊಂದನ್ನು ರೂಪಿಸುವ ಪ್ರಯತ್ನ ನಡೆಸಿತು. ನಾರಾಯಣ ಹೃದಯಾಲಯದ ಸಂಸ್ಥಾಪಕರಾದ ಡಾ.ದೇವಿಪ್ರಸಾದ್ ಶೆಟ್ಟಿಯವರ ಪರಿಕಲ್ಪನೆಯೊಂದಿಗೆ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ ಎ. ರಾಮಸ್ವಾಮಿ ಇವರ ಆಸಕ್ತಿ, ಪ್ರಯತ್ನಗಳ ಫಲವಾಗಿ ಯೋಜನೆಯೊಂದು ರೂಪುಗೊಂಡಿತು. ಸರ್ಕಾರದ ಅನೇಕ ರೈತಪರ ಯೋಜನೆಗಳನ್ನು ಸಮಾಜಕ್ಕೆ ತಲುಪಿಸುತ್ತಿರುವ ಸಹಕಾರ ಸಂಸ್ಥೆಗಳ ಮೂಲಕ ರೈತರ ಆರೋಗ್ಯ ರಕ್ಷಣೆಯ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿ ಪ್ರಯತ್ನಗಳು ಆರಂಭವಾದವು. ಈ ಪ್ರಯತ್ನದ ಫಲವಾಗಿ “ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ”ಯು ದಿನಾಂಕ 14 ನವೆಂಬರ್ 2002ರಂದು ಕರ್ನಾಟಕ ರಾಜ್ಯದ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್ ಎಂ ಕೃಷ್ಣ ಅವರಿಂದ ಉದ್ಘಾಟಿಸಲ್ಪಟ್ಟು, ದಿನಾಂಕ 01 ಜೂನ್ 2003ರಿಂದ ಜಾರಿಗೆ ಬಂದಿತು. ಸಹಕಾರ ಕ್ಷೇತ್ರದಲ್ಲಿನ ರೈತರ ಆರೋಗ್ಯದ ಕಾಳಜಿಯೊಂದಿಗೆ ‘ರೈತರ ಆರೋಗ್ಯ ನಾಡಿನ ಭಾಗ್ಯ’ ಎಂಬ ಘೋಷ ವಾಕ್ಯದೊಂದಿಗೆ ಪರಿಚಯಿಸಲ್ಪಟ್ಟ, ದೇಶದಲ್ಲೇ ಮಾದರಿಯಾದ ಸ್ವಯಂ ಹಣಕಾಸು ಪ್ರಾಯೋಜಕತ್ವದ ಯೋಜನೆ ಇದಾಗಿದೆ.

**ಯೋಜನೆಯ ಅನುಷ್ಠಾನ :** ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ‘ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್’ ಮೂಲಕ ನಡೆಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಆಸ್ಪತ್ರೆಗಳ ಸಂಪರ್ಕ ಜಾಲ ಸಿದ್ಧಪಡಿಸುವುದು, ಶಸ್ತ್ರಚಿಕಿತ್ಸೆಗಳ ವ್ಯಾಪ್ತಿಯನ್ನು ವಿಸ್ತರಿಸಲು ಪ್ರಯತ್ನಿಸುವುದು, ಆಸ್ಪತ್ರೆಗಳಿಗೆ ಮಾರ್ಗದರ್ಶಿ




ಶಿಷ್ಟಾಚಾರಗಳನ್ನು ರಚಿಸಿ ಅದರ ಪಾಲನೆಯ ಬಗ್ಗೆ ಗಮನಹರಿಸುವುದು ಸೇರಿದಂತೆ ಯೋಜನೆಯ ಹಣಕಾಸು ನಿಧಿಯ ನಿರ್ವಹಣೆಯನ್ನು ಈ ಟ್ರಸ್ಟ್ ನಡೆಸುತ್ತದೆ. ಈ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಸಹಕಾರ ಇಲಾಖೆಯು ನಿರ್ವಹಿಸುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು 2017ರಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಈ ಯೋಜನೆಯನ್ನು ಆರೋಗ್ಯ ಇಲಾಖೆಗೆ ವರ್ಗಾಯಿಸುವ ಪ್ರಸ್ತಾಪವಿತ್ತಾದರೂ ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನ ಸಹಕಾರ ಇಲಾಖೆಯ ಮೂಲಕವೇ ಆಗುತ್ತಿದೆ. ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ, 1997 ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಲ್ಲಿ ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ಮೂಲಕ ಈ ಯೋಜನೆಗೆ ಸದಸ್ಯತ್ವವನ್ನು ಪಡೆಯಲಾಗುತ್ತದೆ.

**ರೈತರ ಆರೋಗ್ಯ ರಕ್ಷಣಾ ಯೋಜನೆಯ ಪರಿಚಯ :**

- ಇದು ಸ್ವಯಂ ನಿಧಿ ಶಸ್ತ್ರ ಚಿಕಿತ್ಸಾ ಯೋಜನೆ, ವಿಮಾ ಯೋಜನೆಯಲ್ಲ. ವಿಮಾ ಯೋಜನೆಯಲ್ಲಿ ನೋಂದಣಿ ಮುಂಚೆ ಇರುವ ರೋಗಗಳಿಗೆ ವಿಮಾ ರಕ್ಷಣೆ ಇರುವುದಿಲ್ಲ, ಆದರೆ ಯಶಸ್ವಿನಿ ಯೋಜನೆಯಡಿ ನೋಂದಣಿ ಮುಂಚೆ ಇರುವ ರೋಗಗಳಿಗೂ ಕೂಡ ಶಸ್ತ್ರಚಿಕಿತ್ಸಾ ಸೌಲಭ್ಯವಿರುತ್ತದೆ.
- ಈ ಯೋಜನೆಯ ಸದಸ್ಯರಾಗಲು ವಯೋಮಿತಿಯ ನಿರ್ಬಂಧವಿರುವುದಿಲ್ಲ. ಆರಂಭದಲ್ಲಿ ಗ್ರಾಮೀಣ ಭಾಗದ ಸಹಕಾರಿ ಸದಸ್ಯರಿಗೆ ಮಾತ್ರ ಸೀಮಿತವಾಗಿದ್ದ ಈ ಯೋಜನೆ 2014–15 ರಿಂದ ನಗರ ಭಾಗಕ್ಕೂ ವಿಸ್ತರಿಸಲ್ಪಟ್ಟಿದೆ.
- ನಿಗದಿಪಡಿಸಿದ ವಾರ್ಷಿಕ ವಂತಿಗೆಯನ್ನು ಪಾವತಿಸುವ ಮೂಲಕ ಸದಸ್ಯತ್ವ ಪಡೆದು, ಈ ಯೋಜನೆಯ ವ್ಯಾಪ್ತಿಯಲ್ಲಿರುವ ಶಸ್ತ್ರಚಿಕಿತ್ಸೆಗಳನ್ನು ನಿಗದಿತ ಮಿತಿಯೊಳಗೆ, ಯಶಸ್ವಿನಿ ಟ್ರಸ್ಟ್‌ನಿಂದ ಅಂಗೀಕೃತ ರಾಜ್ಯಾದ್ಯಂತ 827 ಸರ್ಕಾರಿ/ ಖಾಸಗಿ ಆಸ್ಪತ್ರೆಗಳಲ್ಲಿ ನಗದುರಹಿತವಾಗಿ ಪಡೆಯಬಹುದು.
- ಯೋಜನೆಯಲ್ಲಿ ಮೂಳೆ, ನೇತ್ರ, ಉದರ, ಕಿವಿ, ನರ, ಹೃದಯ,

ಮೂತ್ರಪಿಂಡ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸುಮಾರು 805ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ನಿಗದಿಪಡಿಸಿದ ನಗದು ಮಿತಿಯೊಳಗೆ ಟ್ರಸ್ಟ್‌ನಿಂದ ಅಂಗೀಕೃತ ಆಸ್ಪತ್ರೆಗಳಲ್ಲಿ ಪಡೆಯಬಹುದಾಗಿದೆ. ಅಲ್ಲದೇ, ರಿಯಾಯಿತಿ ದರದಲ್ಲಿ ಹೊರರೋಗಿ ತಪಾಸಣೆ ಮತ್ತು ರಿಯಾಯಿತಿ ದರದಲ್ಲಿ ವೈದ್ಯಕೀಯ ತಪಾಸಣೆಗಳನ್ನು ಪಡೆಯಬಹುದು.

- ನಗರ ಯಶಸ್ವಿನಿ ಯೋಜನೆಯ ಸದಸ್ಯರು ಆಯಾ ವರ್ಷದಲ್ಲಿ ಒಂದು ಬಾರಿ ಆಸ್ಪತ್ರೆಗೆ ದಾಖಲಾದರೆ ರೂ.1.75/– ಲಕ್ಷಗಳವರೆಗೆ & ಅನೇಕ ಬಾರಿ ಆಸ್ಪತ್ರೆಗೆ ದಾಖಲಾದರೆ ರೂ.2.50/–ಲಕ್ಷಗಳವರೆಗೆ, ಗ್ರಾಮೀಣ ಯಶಸ್ವಿನಿ ಯೋಜನೆಯ ಸದಸ್ಯರು ಒಂದು ಬಾರಿ ಆಸ್ಪತ್ರೆಗೆ ದಾಖಲಾದರೆ ರೂ.1.25/– ಲಕ್ಷಗಳವರೆಗೆ & ಅನೇಕ ಬಾರಿ ಆಸ್ಪತ್ರೆಗೆ ದಾಖಲಾದರೆ ರೂ.2.00/– ಲಕ್ಷಗಳವರೆಗೆ, ಗರಿಷ್ಠ ಮೊತ್ತದ ಚಿಕಿತ್ಸೆಯನ್ನು ಪಡೆಯಬಹುದು.

**ಜನಸಾಮಾನ್ಯರು ಈ ಯೋಜನೆಯ ಸೌಲಭ್ಯ ಪಡೆಯುವುದು ಹೇಗೆ? :**

- ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997, ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ, 2002ರ ಅಡಿ ನೋಂದಾಯಿಸಿರುವ ಕಾರ್ಯನಿರತ ಸಹಕಾರ ಸಂಸ್ಥೆಯಲ್ಲಿ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಸ್ವ–ಸಹಾಯ ಗುಂಪುಗಳ ಸದಸ್ಯರಾಗಿ ಮೂರು ತಿಂಗಳು ಕಳೆದಿರುವವರು ಹಾಗೂ ಸದಸ್ಯರ ಕುಟುಂಬದವರು ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.
- ಸಹಕಾರ ಸಂಸ್ಥೆಯ ಸದಸ್ಯರಾಗಿ ಮೂರು ತಿಂಗಳು ಆಗಿರುವ ಸದಸ್ಯನ ಕುಟುಂಬದ ಸದಸ್ಯರು ಪ್ರತ್ಯೇಕವಾಗಿ ಸಹಕಾರ ಸಂಸ್ಥೆಯ ಸದಸ್ಯತ್ವ ಪಡೆಯಬೇಕಿಲ್ಲ, ಪ್ರಧಾನ ಸದಸ್ಯನ ಕುಟುಂಬವೆಂದು ನಮೂದಿಸಿ ತಮ್ಮ ಪಾಲಿನ ವಂತಿಗೆಯನ್ನು ಪಾವತಿಸಿ ಈ ಯೋಜನೆಯ ಸದಸ್ಯತ್ವ ಪಡೆಯಬಹುದು.
- 2017–18ನೇ ಸಾಲಿಗೆ "ನಗರ ಯಶಸ್ವಿನಿ ಯೋಜನೆ"ಗೆ ರೂ.710/–ಗಳನ್ನು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ರೂ.110/–ಗಳನ್ನು ವಂತಿಗೆಯಾಗಿ ನಿಗದಿಪಡಿಸಲಾಗಿದೆ. "ಗ್ರಾಮೀಣ ಯಶಸ್ವಿನಿ ಯೋಜನೆ"ಗೆ ರೂ.300/–ಗಳನ್ನು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ರೂ.50/–ಗಳನ್ನು ವಂತಿಗೆಯಾಗಿ ನಿಗದಿಪಡಿಸಲಾಗಿದೆ.
- ಯಾವುದೇ ಒಂದು ಕುಟುಂಬದಲ್ಲಿ ಐವರು ಅಥವಾ ಅದಕ್ಕಿಂತ ಹೆಚ್ಚಿಗೆ ಸದಸ್ಯರನ್ನು ಈ ಯೋಜನೆಗೆ ಸದಸ್ಯರನ್ನಾಗಿ ನೋಂದಾಯಿಸಿದಲ್ಲಿ, ವಂತಿಗೆ ಹಣದಲ್ಲಿ ಶೇ.15ರಷ್ಟು ರಿಯಾಯಿತಿ ಇರುತ್ತದೆ.
- ಈ ಯೋಜನೆಯಡಿ ನೋಂದಾಯಿಸುವವರು ಅಗತ್ಯ ವಂತಿಗೆ ಹಣವನ್ನು ಹಾಗೂ ಭಾವಚಿತ್ರವನ್ನು ತಾವು ಸದಸ್ಯರಾಗಿರುವ ಸಹಕಾರ ಸಂಸ್ಥೆಗೆ ಒದಗಿಸಬೇಕಾಗುತ್ತದೆ, ನೋಂದಣಿಯಾಗಿರುವ ಬಗ್ಗೆ ಸಹಕಾರ ಸಂಸ್ಥೆಯಿಂದ ಕಾರ್ಡ್ ನೀಡಲಾಗುತ್ತದೆ.
- ಯಶಸ್ವಿನಿ ಯೋಜನೆ ಅನ್ವಯವಾಗುವ ಆಸ್ಪತ್ರೆಯಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆಗಾಗಿ ಅಥವಾ ಹೊರ ರೋಗಿಯಾಗಿ ದಾಖಲಾಗುವ ಸಂದರ್ಭದಲ್ಲಿ ಯಶಸ್ವಿನಿ ಯೋಜನೆಯಡಿ ನೋಂದಣಿಯಾಗಿರುವ ಕಾರ್ಡ್‌ನ್ನು ಹಾಜರುಪಡಿಸುವ ಮೂಲಕ ನಗದು ರಹಿತ/ ನಗದು ರಿಯಾಯಿತಿ ಚಿಕಿತ್ಸೆಯನ್ನು ಪಡೆಯಬಹುದು.

**ಸಹಕಾರ ಸಂಸ್ಥೆಗಳು ಏನು ಮಾಡಬೇಕು? :**

- ಸಹಕಾರ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಉಪ ನಿಬಂಧಕರ ಕಛೇರಿಯನ್ನು ಸಂಪರ್ಕಿಸಿ ಯಶಸ್ವಿನಿ ಯೋಜನೆಗೆ ನೋಂದಣಿ ಮಾಡಲು ಅಗತ್ಯವಾದ ಕಾರ್ಡ್/ ಅರ್ಜಿ/ ಪುಸ್ತಕಗಳನ್ನು ಪಡೆದುಕೊಳ್ಳಬೇಕು.
- ತಮ್ಮ ಸಂಸ್ಥೆಯಲ್ಲಿ ಸದಸ್ಯತ್ವ ಪಡೆದು ಮೂರು ತಿಂಗಳು ಕಳೆದಿರುವ ಸದಸ್ಯರು ಹಾಗೂ ಅವರ ಕುಟುಂಬದವರನ್ನು ಈ ಯೋಜನೆಗೆ ನಿಗದಿತ ವಂತಿಗೆ ಪಡೆಯುವ ಮೂಲಕ ನೋಂದಣಿ ಮಾಡಿಸಬೇಕು. ವಂತಿಗೆ ಹಣ ಪಡೆದ ಬಗ್ಗೆ ಸಂಸ್ಥೆಯ ಹಣ ಸ್ವೀಕೃತಿ ರಶೀದಿಯನ್ನು ಕೊಡಬೇಕು.
- ಈ ಯೋಜನೆಯಡಿ ಪಡೆದುಕೊಳ್ಳುವ ಪ್ರತಿ ಸದಸ್ಯರ ವಂತಿಗೆ ಹಣದಲ್ಲಿ ಹತ್ತು ರೂಪಾಯಿಗಳು, ಸಾದಿಲ್ವಾರು ವೆಚ್ಚಕ್ಕಾಗಿ ಹಾಗೂ ಸದಸ್ಯರನ್ನು ನೋಂದಾಯಿಸಲು ಶ್ರಮಿಸಿದವರಿಗೆ ಪ್ರೋತ್ಸಾಹ ಧನವಾಗಿ ಸಹಕಾರ ಸಂಸ್ಥೆಗೆ ದೊರೆಯುತ್ತದೆ.
- ಸಹಕಾರ ಸಂಸ್ಥೆಗಳು ಪ್ರತಿ ಸದಸ್ಯನ ವಂತಿಗೆ ಹಣದಲ್ಲಿ ಹತ್ತು ರೂಪಾಯಿಗಳನ್ನು ಇಟ್ಟುಕೊಂಡು ಉಳಿದಂತೆ ಸಂಗ್ರಹವಾದ ವಂತಿಗೆ ಹಣವನ್ನು ಆಯಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿರುವ ಯಶಸ್ವಿನಿ ಖಾತೆಗೆ ಹಣ ಸ್ವೀಕರಿಸಿದ 15 ದಿನಗಳೊಳಗಾಗಿ ಜಮಾ ಮಾಡಿ, ರಶೀದಿಯನ್ನು ಉಪನಿಬಂಧಕರ ಕಛೇರಿಗೆ ಸಲ್ಲಿಸಬೇಕು.
- ಈ ಯೋಜನೆಗೆ ನೋಂದಣಿಯ ಸಂದರ್ಭದಲ್ಲಿ, ಉಪನಿಬಂಧಕರಿಂದ ಪಡೆದ ಅರ್ಜಿ ನಮೂನೆಯಲ್ಲಿ ಸದಸ್ಯರ ವಿವರಗಳನ್ನು ಭರ್ತಿ ಮಾಡಿಸಿ ಫೋಟೋ ಅಂಟಿಸಬೇಕು ಹಾಗೂ ಕಡ್ಡಾಯವಾಗಿ ಆಧಾರ ಸಂಖ್ಯೆಯನ್ನು ನಮೂದಿಸಬೇಕು. ಭರ್ತಿ ಮಾಡಿದ ಅರ್ಜಿಗಳ ಕಛೇರಿ ಪ್ರತಿಯನ್ನು ಡಾಟಾ ಎಂಟ್ರಿಗಾಗಿ ಉಪನಿಬಂಧಕರ ಕಛೇರಿಗೆ ಕಳುಹಿಸಬೇಕು.
- ಸರ್ಕಾರಿ ನೌಕರರು, ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಅಥವಾ ಬೇರೆ ಯಾವುದೇ ಆರೋಗ್ಯ ವಿಮಾ ಯೋಜನೆಯ ಸೌಲಭ್ಯ ಹೊಂದಿರುವವರನ್ನು, ಈ ಯೋಜನೆಯ ಫಲಾನುಭವಿಯಾಗಿ ನೋಂದಾಯಿಸುವಂತಿಲ್ಲ.

2017–18ನೇ ಸಾಲಿನ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಸದಸ್ಯತ್ವ ನೋಂದಣಿಯ ಕಾರ್ಯ ದಿನಾಂಕ ಮೇ 01, 2017ರಿಂದಲೇ ಆರಂಭವಾಗಿದೆ. ದಿನಾಂಕ 30 ಜೂನ್ 2017ರವರೆಗಿದ್ದ ನೋಂದಣಿ ಮುಕ್ತಾಯದ ಅವಧಿಯನ್ನು ದಿನಾಂಕ 31 ಆಗಸ್ಟ್ 2017ರವರೆಗೆ ವಿಸ್ತರಿಸಲಾಗಿದೆ. 2016–17ನೇ ಸಾಲಿನಲ್ಲಿ 43 ಲಕ್ಷಕ್ಕೂ ಅಧಿಕ ಜನರು ಈ ಯೋಜನೆಯ ಸದಸ್ಯತ್ವ ಪಡೆದಿದ್ದು, 1.95 ಲಕ್ಷದಷ್ಟು ಶಸ್ತ್ರಚಿಕಿತ್ಸೆ ಹಾಗೂ 2.71 ಲಕ್ಷದಷ್ಟು ಹೊರರೋಗಿ ತಪಾಸಣೆಯ ವೆಚ್ಚವನ್ನು ಈ ಯೋಜನೆಯಡಿ ಭರಿಸಲಾಗಿದೆ. ಸಮಾಜದ ಆರೋಗ್ಯದ ದೃಷ್ಟಿಯಿಂದ ಸಹಕಾರ ಕ್ಷೇತ್ರವು ಸಾಮಾಜಿಕ ಬದ್ಧತೆಯ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಅವಶ್ಯಕತೆಯಿದೆ. ರಾಜ್ಯದ ಕೆಲವು ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರ ಯಶಸ್ವಿನಿ ವಂತಿಗೆಯಲ್ಲಿ ಭಾಗಶಃ ಹಣವನ್ನು ಸಂಸ್ಥೆಯ ಸ್ವಂತ ಬಂಡವಾಳದಿಂದ ಭರಿಸುತ್ತಿವೆ, ಈ ಮೂಲಕ ಸದಸ್ಯರ ಆರೋಗ್ಯ ರಕ್ಷಣೆಯ ಕುರಿತು ತಮ್ಮ ಕಾಳಜಿಯನ್ನು ತೋರ್ಪಡಿಸುತ್ತಿವೆ. ಸಹಕಾರಿಯ ಸದಸ್ಯರ ಹಾಗೂ ಜನತೆಯ ಆರೋಗ್ಯದ ದೃಷ್ಟಿಯಿಂದ ರಾಜ್ಯ ಸರ್ಕಾರದ ಮಾದರಿ ಹಾಗೂ ಜನಪ್ರಿಯ ಯೋಜನೆಯಾದ 'ಯಶಸ್ವಿನಿ ಆರೋಗ್ಯ ಯೋಜನೆ'ಯನ್ನು ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರಿಗೆ ತಲುಪಿಸುವಲ್ಲಿ ಶ್ರಮಿಸಬೇಕಿದೆ. ಈ ನಿಟ್ಟಿನಲ್ಲಿ ಸಹಕಾರಿಗಳು ಗಮನಹರಿಸಲಿ.

# ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಗ್ರಾಹಕರು/ ಸದಸ್ಯರು, ಸಿಬ್ಬಂದಿಗಳು ಹಾಗೂ ಆಡಳಿತ ಮಂಡಲಿಯ ಪಾತ್ರ



– ನಟರಾಜ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ವಿಭಾಗ, ಕ.ರಾ.ಸೌ.ಸಂ.ಸ.ನಿ.

ಇಂದು ಜಗತ್ತು ಕ್ಷಣ-ಕ್ಷಣಕ್ಕೂ ಬದಲಾಗುತ್ತಿದೆ, ಈ ಬದಲಾವಣೆಯ ವೇಗ ಹೇಗಿದೆಯೆಂದರೆ ಮನಸ್ಸಿನ ಕಾಲ್ಪನಿಕ ವೇಗವನ್ನು ಹಿಂದಿಕ್ಕಿ ಮುನ್ನುಗ್ಗುವ ಛಲದಂಕನಂತಿದೆ. ಭಾರತದ ಆರ್ಥಿಕ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಗಮನಾರ್ಹ ಬದಲಾವಣೆಯ ಗಾಳಿ ಬೀಸುತ್ತಿದೆ. ಈ ಗಾಳಿಯ ಹೊಡೆತಕ್ಕೆ ಅದೆಷ್ಟೋ ಆರ್ಥಿಕ ಸಂಸ್ಥೆಗಳು/ ಜನರುಗಳು ಬೆಚ್ಚಿ ಬಿದ್ದಿದ್ದಾರೆ ಮತ್ತು ಬೀಳುತ್ತಿದ್ದಾರೆ. ಆದ್ದರಿಂದ, ಆರ್ಥಿಕವಾಗಿ ವ್ಯವಹಾರ ನಡೆಸುತ್ತಿರುವ ಸಂಸ್ಥೆಗಳು ಇಂತಹ ಗಾಳಿಯನ್ನು ತಡೆ ಹಿಡಿಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕಿದೆ ಮತ್ತು ಇದು ಪ್ರಸ್ತುತ ಸನ್ನಿವೇಶದಲ್ಲಿ ಅನಿವಾರ್ಯ ಮತ್ತು ಅವಶ್ಯಕವಾಗಿಯೂ ಆಗಿದೆ.

**ಸ್ವಾಟ್ ಅನಾಲಿಸಿಸ್ ಮಾಡುವುದು ಅಗತ್ಯ :** ಪ್ರಥಮ ಹಂತದಲ್ಲಿ ಸಹಕಾರಿಗಳು ಈ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕೆಂದರೆ ತಮ್ಮ ಸಂಸ್ಥೆಯ ಆಧಾರ ಸ್ಥಂಭಗಳಾದ ಗ್ರಾಹಕರು/ ಸದಸ್ಯರು, ಸಿಬ್ಬಂದಿಗಳು ಮತ್ತು ಆಡಳಿತ ಮಂಡಲಿಯ ಸದಸ್ಯರುಗಳು ಇವುಗಳನ್ನು ಭದ್ರಪಡಿಸಿಕೊಳ್ಳಬೇಕು. ಯಾವುದೇ ಆರ್ಥಿಕ ಸಂಸ್ಥೆಯು ಅದು ಬ್ಯಾಂಕಾಗಲೀ, ಸಹಕಾರಿ ಸಂಸ್ಥೆ ಆಗಲೀ ಅಥವಾ ಇನ್ಯಾವುದೇ ಸಂಸ್ಥೆ ಆಗಲೀ, ಮೊದಲು ಅದು ತಮ್ಮ ಸಂಸ್ಥೆಯ ಸ್ವಾಟ್ ಅನಾಲಿಸಿಸ್ ಮಾಡಿಕೊಳ್ಳಬೇಕು, ನಂತರ ಅದರ ಆಧಾರದ ಮೇಲೆ ಗುರಿಗಳನ್ನು ನಿಗದಿಪಡಿಸಬೇಕು.

**ಕೌಶಲ್ಯ ವೃದ್ಧಿಗಾಗಿ ತರಬೇತಿ :** ಗುರಿಗಳನ್ನು ಯಶಸ್ವಿಯಾಗಿ ಪೂರೈಸಬಲ್ಲ ಕೌಶಲ್ಯಪೂರಿತ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬೇಕು ಅಥವಾ ಈಗಾಗಲೇ ಸಿಬ್ಬಂದಿಗಳಿದ್ದರೆ ಅವರಿಗೆ ವಿವಿಧ ರೀತಿಯ ತರಬೇತಿಗಳನ್ನು ನೀಡಿ ಕೌಶಲ್ಯಪೂರ್ಣರನ್ನಾಗಿ ಮಾಡಬೇಕು. ಅವರ ಅವಶ್ಯಕತೆಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಪೂರೈಸಬೇಕು, ಇದರಿಂದ ಸಿಬ್ಬಂದಿಗಳು ಸಂತೃಪ್ತಿಗೊಂಡು ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ. ಸಂಸ್ಥೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದುತ್ತಾರೆ. ಸಂಸ್ಥೆಯ ಗುರಿಗಳನ್ನು ಈಡೇರಿಸಲು ತಾವೇ ಸ್ವತಃ ಯೋಜನೆಯನ್ನು ಸಿದ್ಧಪಡಿಸಿಕೊಂಡು ಅವುಗಳನ್ನು ನಿಗದಿಪಡಿಸಿದ ವೇಳೆಯಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸುತ್ತಾರೆ. ಇದರಿಂದ ಸಂಸ್ಥೆಗೆ, ಸಿಬ್ಬಂದಿಗಳಿಗೆ ಹಾಗೂ ಗ್ರಾಹಕರಿಗೆ/ ಸದಸ್ಯರಿಗೆ ಅನುಕೂಲವಾಗುತ್ತದೆ.

**ಉತ್ತಮ ಗ್ರಾಹಕ ಸೇವೆ :** ಸಂಸ್ಥೆಯ ಗುಣಮಟ್ಟ ಹೆಚ್ಚಿ, ಹೆಚ್ಚು ಲಾಭ ಗಳಿಸಲು ಯಾವುದೇ ಸಂಸ್ಥೆಯೇ ಆಗಲಿ ಅದರ ಸಿಬ್ಬಂದಿಗಳು/ ಆಡಳಿತ ಮಂಡಲಿ ಸದಸ್ಯರು ಮೊದಲು ತನ್ನ ಗ್ರಾಹಕರನ್ನು/ ಸದಸ್ಯರನ್ನು ನಗುಮೊಗದಿಂದ ಸ್ವಾಗತಿಸಿ, ಅವರ ಅವಶ್ಯಕತೆಗಳನ್ನು ಅರ್ಥಮಾಡಿಕೊಂಡು, ಅವರನ್ನು ಸಂತೃಪ್ತಿಗೊಳಿಸಲು ಪ್ರಯತ್ನಿಸಬೇಕು. ಇದರಿಂದ ಗ್ರಾಹಕರು/ ಸದಸ್ಯರಲ್ಲಿ ಸಂಸ್ಥೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿ ಅವರು ಹೆಚ್ಚಿನ ವ್ಯವಹಾರ ಮಾಡಲು ಆಸಕ್ತಿ ತೋರಿಸುತ್ತಾರೆ ಮತ್ತು ಹೆಚ್ಚಿನ ಗ್ರಾಹಕರನ್ನು/ ಸದಸ್ಯರನ್ನು ಸಂಸ್ಥೆಯ ಕಡೆ ಬರುವಂತೆ ಮಾಡುತ್ತಾರೆ. ಇದರಿಂದ ಸಂಸ್ಥೆಯಲ್ಲಿ ಎಲ್ಲಾ ರೀತಿಯ ವ್ಯವಹಾರಗಳು ಹೆಚ್ಚಾಗುವುದರ ಜೊತೆಗೆ ಲಾಭವು ಕೂಡ ಹೆಚ್ಚಾಗುತ್ತದೆ.

**ಗುಡ್‌ವಿಲ್ ಬೆಳೆಸಿಕೊಳ್ಳುವುದು ಅಗತ್ಯ :** ಸಂಸ್ಥೆಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಹೆಸರು (ಗುಡ್‌ವಿಲ್) ಬಂದು ಗಟ್ಟಿಯಾಗಿ ನೆಲೆಯೂರಲು, ವ್ಯವಹಾರವನ್ನು ವಿಸ್ತರಿಸಲು, ಭವಿಷ್ಯದಲ್ಲಿ ಉಂಟಾಗಬಹುದಾದ ಬದಲಾವಣೆಗಳನ್ನು ಸಮರ್ಥವಾಗಿ ಎದುರಿಸಲು, ಮಾರುಕಟ್ಟೆಯ ಸ್ಪರ್ಧೆಯನ್ನು ತಡೆಯಲು ಮತ್ತು ಈಗಿರುವ ಗ್ರಾಹಕರನ್ನು/ ಸದಸ್ಯರನ್ನು ಉಳಿಸಿಕೊಳ್ಳಲು ಹಾಗೂ ಹೊಸ ಗ್ರಾಹಕರನ್ನು/ ಸದಸ್ಯರನ್ನು ಆಕರ್ಷಿಸಲು ಅನುಕೂಲವಾಗುತ್ತದೆ. ಸಂಸ್ಥೆಯ ಆಡಳಿತ ಮಂಡಲಿ ಮತ್ತು ಸಿಬ್ಬಂದಿಗಳು ಸಂಸ್ಥೆಯ ಗುರಿ ಸಾಧನೆಗಾಗಿ ಅವಶ್ಯಕ ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ನಿರಂತರವಾಗಿ ಪರಾಮರ್ಶಿಸಬೇಕು, ಎಲ್ಲಿ ಗುರಿ ಸಾಧನೆಯ ಹಾದಿ ತಪ್ಪುತ್ತಿದೆಯೋ ಅಲ್ಲಿಯೇ ಅವುಗಳನ್ನು ಸರಿಪಡಿಸಿಕೊಳ್ಳಬೇಕು ಮತ್ತು ಗುರಿ ಸಾಧನೆಗೆ ಅವಶ್ಯಕವಾಗಿ ಬೇಕಾದ ವಾತಾವರಣವನ್ನು ಸಂಸ್ಥೆಯ ಆಡಳಿತ ಮಂಡಲಿಯವರು ಸಿಬ್ಬಂದಿಗಳಿಗೆ ಒದಗಿಸಿಕೊಡಬೇಕು.

**ಹಣಕಾಸಿನ ನಿರ್ವಹಣೆ :** ಸಹಕಾರಿ ಸಂಸ್ಥೆಗಳಲ್ಲಿ ಹಣಕಾಸಿನ ನಿರ್ವಹಣೆ ಅತ್ಯಂತ ಮುಖ್ಯ ಪಾತ್ರ ವಹಿಸುತ್ತದೆ. ಈ ಬಗ್ಗೆ ಆಡಳಿತ ಮಂಡಲಿ ಸದಸ್ಯರಲ್ಲಿ ಹೆಚ್ಚಿನ ತಿಳುವಳಿಕೆ ಇರಬೇಕಾಗುತ್ತದೆ. ಗುಣಾತ್ಮಕವಾದ ಸಾಲಗಳನ್ನು ನೀಡಬೇಕು, ಹಣವನ್ನು ಒಂದೇ ಕಡೆ ಹೂಡಿಕೆ ಮಾಡದೇ ವಿವಿಧ ರೀತಿಯ ಯೋಜನೆಗಳಲ್ಲಿ ಹೂಡಿಕೆ ಮಾಡಬೇಕು, ಬಡ್ಡಿಯೇತರ ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕು, ಕಾರ್ಯವ್ಯಾಪ್ತಿಯ ಉಳಿದ ಸಂಸ್ಥೆಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದಿರಬೇಕು, ಅನಗತ್ಯವೆನಿಸಬಹುದಾದ ವೆಚ್ಚಗಳನ್ನು ಗುರುತಿಸುವುದು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ವೆಚ್ಚಗಳನ್ನು ಕಡಿಮೆ ಮಾಡಬೇಕು, ವಿವಿಧ ರೀತಿಯ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು, ವಿವಿಧ ರೀತಿಯ ಠೇವಣಿ ಯೋಜನೆಗಳನ್ನು ರೂಪಿಸಿ, ಆಕರ್ಷಕ ಬಡ್ಡಿ ದರವನ್ನು ನೀಡಿ, ಠೇವಣಿಗಳನ್ನು ಹೆಚ್ಚು ಸಂಗ್ರಹಿಸಬೇಕು ಮತ್ತು ಸದಸ್ಯರ ಸಂಖ್ಯೆ ಹೆಚ್ಚಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಇವೆಲ್ಲವುಗಳ ಜೊತೆಗೆ ಸಹಕಾರ ತತ್ವಗಳ ಅನುಷ್ಠಾನ ಅದರಲ್ಲೂ ವಿಶೇಷವಾಗಿ ಸಾಮಾಜಿಕ ಕಳಕಳಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಶಕ್ತಿಯನ್ನು ಹೊಂದಿರಬೇಕು.

ಒಟ್ಟಾರೆ ಸೌಹಾರ್ದ ಸಹಕಾರಿ ಸಂಸ್ಥೆಗಳ ಅಭಿವೃದ್ಧಿ ಸಕ್ರಿಯ ಸದಸ್ಯರ ನುರಿತ ಆಡಳಿತ ಮಂಡಲಿಯ ಹಾಗೂ ಕ್ರಿಯಾಶೀಲ ಸಿಬ್ಬಂದಿಯವರನ್ನು ಅವಲಂಬಿಸಿದೆ. ಈ ಮೂರು ವಿಭಾಗಗಳಲ್ಲಿ ಉತ್ತಮ ನಡೆ-ನುಡಿ ಹಾಗೂ ಕ್ರಿಯೆಗಳ ಪರಿಣಾಮಕಾರಿ ಅನುಷ್ಠಾನದ ಅಗತ್ಯತೆ ಇದೆ.



# LIFE EMPOWERMENT – Principles for Happy Life

By: 'Management Guru' **Harish R.,**
**CEO, KM Global TechManage Services, Bangalore.**
**Mob. No. : 09980143596.**



Life is empowered with abundant of power bestowed by the divine, within each one of us. But, unfortunately we have NOT made a sincere attempt to discover our TRUE SELF, instead we are wondering outside in search for power to succeed & be happy !. Now, whoever is reading this article is blessed, because of your inner craving for truth to activate limitless power in you to face the challenges, problems, crisis etc. You should aim and you will get 'what you want in life'

All of us MUST remember that "We have tremendous power within us, which is beyond your dreams". Whatever may be your situation right now, you will overcome in flying colours, the moment you know your capacity. The purpose of human life is awakening the true self and be what you are made to be. We have disconnected our self from our originality. Life empowerment role is to connect our self to our originality in a scientific systematic approach.



The journey which you will be experiencing from now on is an inexperienced untraveled supremacy within you. The outer world which you are seeing is the reflection of your inner world, if you change your inner world your outer world will be changed. Let us travel this spectacular journey by discovering 'who we are?'

To understand in a simple way scientifically, if you could see yourself under a powerful electron microscope, you would see that you are made up of a cluster of ever-changing energy in the form of electron, neutrons, photons and so on and the rest of 99.9999% of an Atom is space. Therefore, you and I are made of 99.9999% Space. So is everything else around you.

You are not a drop in the ocean but an ocean in every drop. Every cell in the body is intelligent to think and act. We have many trillions of cells; the Upanishads talk about "Yatha Pinde tatha Brahmande" as is the atom so is the universe. Life is an illusion or maya, we think that I am this body but in reality I means entire universe. We are limiting ourselves as I body, My family, My house etc.. The moment you disconnect from yourself, the sufferings, obstacles, hindrances, setbacks, diseases, failures etc will emerge - as we are incapable to face them with limited power.

**"Connect yourself in all: naturally**
**entire universe will be connected within you"**
**- Management Guru Harish R.**

Each and every living and non-living thing in this universe is having energy and they can feel act and react to the frequency of your feelings. The root cause of all our problems is our thoughts, majority of the time we focus on negative thoughts and emit negative power to take a form in reality. OUR LIFE is controlled by our emotions & feelings through OUR THOUGHTS.

When the cells are living in a state of grudge they soon start exhibiting that with each other and destroying healthy cells in the body. This leads to many forms of auto immune disease, so you are not a drop in the ocean you are an ocean in every drop.

Be cautious of your thoughts, your feelings and your emotions. The health of a person depends on how well all the systems of the body and cells play the melody of harmony together. Let us say, you hold a negative emotion towards somebody, something or some event in your life, then each time you think of that your whole body relives the emotional upheaval of that association.

Your mind does not have a mind of its own, and does not know if the event is happening in real time or it is being replayed, so it produces the same stress hormones each and every cell of your body starts feeling the same emotion, let us say grudge towards that event person or experience all over again.


The body is not at ease this is a state where the condition of disease sets in. If you continue to live in that state your cells are not getting conditioned to live in the same state.

To lead a HEALTHY & HAPPY LIFE FOREVER: we should adopt & follow few basic principles in LIFE like (a) live with divine bliss, (b) give love unconditionally, (c) forgive and forget, (d) always search an opportunity to serve others, and (e) have happy thoughts always.

We are the CREATORS OF OUR DESTINY: It may be health, family, social, wealth, career, prosperity, success etc., if you change your inner universe you can change your outer universe this can happen with your thoughts, feelings and emotions.

Please DO REMEMBER those Life Empowerment principles broadly include:

1) Know your true self.
2) Lead a life of abundance.
3) Connect in all living and non-living beings in the entire universe.
4) Lead a life of harmony.
5) Adopt unconditional love, service, accept people as they are,
6) LEARN to forgive and forget, smile and laugh from heart,
7) Hence, leading a blissful & divine LIFE.



# RBI NEWS - July 2017

K. Vittal Shetty, Banking Consultant, kohimavittal@Hotmail.com, Mobile:9845699904

**Aug 02, 2017 :** Third Bi-monthly Monetary Policy Statement, 2017-18 Resolution of the Monetary Policy Committee (MPC) Reserve Bank of India

On the basis of an assessment of the current and evolving macroeconomic situation at its meeting today, the Monetary Policy Committee (MPC) decided to:

- reduce the policy repo rate under the liquidity adjustment facility (LAF) by 25 basis points from 6.25 per cent to 6.0 per cent with immediate effect.

Consequently, the reverse repo rate under the LAF stands adjusted to 5.75 per cent, and the marginal standing facility (MSF) rate and the Bank Rate to 6.25 per cent.

The decision of the MPC is consistent with a neutral stance of monetary policy in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

The next meeting of the MPC is scheduled on October 3 and 4, 2017.

| Policy Rates with effect from 02 AUGUST 2017 | % |
|---|---|
| POLICY REPO RATE | 6.00% |
| REVERSE REPO RATE | 5.75% |
| MARGINAL STANDING FACILITY RATE | 6.25% |
| BANK RATE | 6.25% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 24 JUNE 2017 | 20.00% |

## IMPORTANT NEWS

**July 03, 2017 :** Master Circular – Facility for Exchange of Notes and Coins

Please refer to the Master Circular DCM(NE)No. G-1/08.07.18/2016-17 dated July 18, 2016 containing instructions on the facility for exchange of notes and coins. A revised version of Master Circular on the subject is annexed for your information and necessary action. This Master Circular is placed in our website www.rbi.org.in.

## ANNEX

Master Circular – Facility for Exchange of Notes and Coins dated July 03, 2017

**1. Facility for exchange of notes and coins at bank branches**

(a) All branches of banks in all parts of the country are mandated to provide the following customer services, more actively and vigorously to the members of public so that there is no need for them to approach the RBI Regional Offices for this purpose:

(i) Issuing fresh / good quality notes and coins of all denominations on demand,

(ii) Exchanging soiled / mutilated / defective notes, and

(iii) Accepting coins and notes either for transactions or exchange. In terms of section 6 (1) of The Coinage Act, 2011, the coins issued under the authority of section 4 shall be a legal tender in payment or on account, in case of :-

a. a coin of any denomination not lower than one rupee, for any sum not exceeding one thousand rupees;

b. a half-rupee coin, for any sum not exceeding ten rupees:

Provided that the coin has not been defaced and has not lost weight so as to be less than such weight as may be prescribed in its case.

(b) All branches should provide the above facilities to members of public without any discrimination on all working days. The scheme of providing exchange facility by a few select currency chest branches on one of the Sundays in a month will remain unchanged. The names and addresses of such bank branches should be available with the respective banks.

(c) The availability of the above-mentioned facilities at the bank branches should be given wide publicity for information of the public at large.

(d) None of the bank branches should refuse to accept small denomination notes and / or coins tendered at their counters.

**2. Procedure for exchange of soiled/ mutilated/ imperfect notes**

2.1 Exchange of soiled notes

2.1.1 Notes presented in small number: Where the number of notes presented by a person is up to 20 pieces with a maximum value of ₹ 5000 per day, banks should exchange them over the counter, free of charge.

2.1.2 Notes presented in bulk: Where the number of notes presented by a person exceeds 20 pieces or ₹ 5000 in value per day, banks may accept them, against receipt, for value to be credited later. Banks may levy service charges as permitted in Master Circular on Customer Service in Banks

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Permitted Date : 18th August 2017
Registered No. KA/BGW/1744/2017-19. RNI No. KARBIL - 2004/18001/Pages 28


(DBR.No.Leg.BC.21/09.07.006/2015-16 dated July 1, 2015). In case tendered value is above ₹ 50000, banks are expected to take the usual precautions.

2.2 Exchange of mutilated and imperfect notes

2.2.1 While designated branches may continue to follow the procedure as laid down in Part III of NRR, 2009 (www.rbi.org.in →Publications→Occassional) for exchanging mutilated and imperfect notes and issue receipt for the notes presented for adjudication, non-chest branches are required to follow the following procedure for notes presented in small numbers and in bulk.

2.2.2 Notes presented in small number: Where the number of notes presented by a person is up to 5 pieces, non-chest branches should normally adjudicate the notes as per the procedure laid down in Part III of NRR, 2009 and pay the exchange value over the counter. If the non-chest branches are not able to adjudicate the mutilated notes, the notes may be received against a receipt and sent to the linked currency chest branch for adjudication.

The probable date of payment should be informed to the tenderers on the receipt itself and the same should not exceed 30 days. Bank account details should be obtained from the tenderers for crediting the exchange value by electronic means.

2.2.3 Notes presented in bulk: Where the number of notes presented by a person is more than 5 pieces not exceeding ₹ 5000 in value, should be advised to send such notes to nearby currency chest branch by insured post giving his / her bank account details (a/c no, branch name, IFSC, etc.) or get them exchanged thereat in person. All other persons tendering mutilated notes whose value exceeds ₹ 5000 should be advised to approach nearby currency chest branch. Currency chest branches receiving mutilated notes through insured post should credit the exchange value to the account of sender by electronic means within 30 days of receipt of notes.

2.3 Tenderers aggrieved with the service provided by the banks in this regard may approach Banking Ombudsman concerned, following the procedure as laid under Banking Ombudsman Scheme, 2006 with the bank /postal receipts as proof for necessary action.

**July 13, 2017:** Recording of Details of Transactions in Passbook/Statement of Account by Co-operative Banks

Please refer to circular UBD.CO.BPD.(PCB). No.18/12.05.001/2010-11 dated October 26, 2010 and para 4.6.3 of Annex to our circular RPCD.CO.RCB. BC.No.36/07.51.010/2014-15 dated October 22, 2014, advising co-operative banks to avoid inscrutable entries in passbooks / statements of account and ensure that brief, intelligible particulars are invariably entered in passbooks / statements of account with a view to avoiding inconvenience to depositors.

2. It has come to our notice that many banks still do not provide adequate details of the transactions in the passbooks and / or statements of account to enable the account holders to cross-check them. In the interest of better customer service, it has been decided that banks shall at a minimum provide the relevant details in respect of entries in the accounts as indicated in the Annex. The list of the transactions mentioned in the Annex is indicative and not exhaustive.

3. Co-operative Banks shall also incorporate information about 'deposit insurance cover' along with the limit of coverage, subject to change from time to time, upfront in the passbooks.

**Directions, Withdrwals, Penalties & Cancellation of Licences of Urban Co-operative Banks.**

**1) Jul 03, 2017 :** Laxmi Mahila Nagrik Sahkari Bank Maryadit, Raipur – Penalized of ₹ 3,00,000/- (₹ Three lakh only)for violation of guidelines on 'Know Your Customer' (KYC) issued by the Reserve Bank of India.

**2) Jul 31, 2017 :** Reserve Bank of India imposes monetary penalty₹ 10 million on Union Bank of Indiafor non-compliance with the directions issued by RBI on Know Your Customer (KYC) norms.

**3) Jul 31, 2017 :** Reserve Bank of India imposes monetary penaltyof ₹ 20 millionon Union Bank of Indiafor non-compliance with the directions issued by RBI on Know Your Customer (KYC) norms.

Source: www.rbi.org.in

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010